ಸಂಪುಟ 01 । ಸಂಚಿಕೆ 166 । ಭಾನುವಾರ 10 ಮೇ 2026 । ಪುಟ 4 । ಬೆಲೆ-2 ರೂ.

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಹೇಮರೆಡ್ಡಿ ಮಲ್ಲಮ್ಮ ಜಯಂತಿ**

ಹೇಮರೆಡ್ಡಿ ಮಲ್ಲಮ್ಮ 14 ನೇ ಶತಮಾನದಲ್ಲಿ ಮಹಿಳಾ ಸಂತರಾಗಿದ್ದರು. ಕರ್ನಾಟಕ ಸರ್ಕಾರವು ಪ್ರತಿ ವರ್ಷ ಮೇ 10 ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಆಚರಿಸುತ್ತದೆ.

**2) ವಿಶ್ವ ಲೂಪಸ್ ದಿನ**

ಪ್ರತಿ ವರ್ಷ ಮೇ 10 ರಂದು, ಪ್ರಪಂಚದಾದ್ಯಂತ ಜನರು ವಿಶ್ವ ಲೂಪಸ್ ದಿನವನ್ನು ಆಚರಿಸುತ್ತಾರೆ. ಸಂಬಂಧವಿಲ್ಲದ ಲಕ್ಷಣಗಳು ವಾಸ್ತವವಾಗಿ ದೀರ್ಘಕಾಲದ, ದುರ್ಬಲಗೊಳಿಸುವ ಸ್ವಯಂ ನಿರೋಧಕ ಕಾಯಿಲೆಯ ಲಕ್ಷಣಗಳಾಗಿವೆ ಎಂಬ ಅಂಶದ ಬಗ್ಗೆ ನಮಗೆ ಹೆಚ್ಚಿನ ಅರಿವು ಮೂಡಿಸುವುದು ಇದರ ಉದ್ದೇಶವಾಗಿತ್ತು.

**3) ತಾಯಂದಿರ ದಿನ**

(ಮೇ ತಿಂಗಳ ಎರಡನೇ ಭಾನುವಾರ)
ತಾಯಂದಿರನ್ನು ಗೌರವಿಸಲು ಪ್ರತಿ ವರ್ಷ ಮೇ ತಿಂಗಳ ಎರಡನೇ ಭಾನುವಾರದಂದು ತಾಯಂದಿರ ದಿನವನ್ನು ಆಚರಿಸಲಾಗುತ್ತದೆ ಮತ್ತು ಪ್ರಪಂಚದಾದ್ಯಂತ ವಿವಿಧ ರೂಪಗಳಲ್ಲಿ ಆಚರಿಸಲಾಗುತ್ತದೆ. ತಾಯಂದಿರ ದಿನವನ್ನು 1907 ರಲ್ಲಿ ತಾಯಂದಿರು ಮತ್ತು ತಾಯ್ತನದ ಗೌರವಾರ್ಥವಾಗಿ ತಾಯಂದಿರ ದಿನವನ್ನು ಆಚರಿಸುವ ಕಲ್ಪನೆಯನ್ನು ನೀಡಿದ ಅನ್ನಾ ಜಾರ್ವಿಸ್ ಸ್ಥಾಪಿಸಿದರು. ರಾಷ್ಟ್ರೀಯವಾಗಿ ಈ ದಿನವನ್ನು 1914 ರಲ್ಲಿ ಗುರುತಿಸಲಾಯಿತು.

## ಸುಭಾಷಿತ

ಇಂದು ಇಲ್ಲದ್ದು ನಾಳೆ ಇರಬಹುದು.
ಆದ್ದರಿಂದ, ಇಲ್ಲದುದಕ್ಕೆ ಚಿಂತಿಸದೆ ಜೀವನವನ್ನು
ಸಾಗಿಸುವುದೇ ಉತ್ತಮ ಮಾರ್ಗ.

–ದ.ರಾ.ಬೇಂದ್ರೆ

# ಶೃಂಗೇರಿ ಅಂಚೆ ಮತ ವಿವಾದ

## ದೇವರ ಮುಂದೆ ಸುಧೀರ್ ಮುರೊಳ್ಳಿ ಪ್ರಮಾಣ



**ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಪತ್ರಗಳ ಮರು ಎಣಿಕೆಯ ವಿವಾದ ಈಗ ಧಾರ್ಮಿಕ ಆಯಾಮ ಪಡೆದುಕೊಂಡಿದ್ದು, 2023ರಲ್ಲಿ ನಡೆದಿದ್ದ ಮತ ಎಣಿಕೆಯಲ್ಲಿ ಯಾವುದೇ ಪಕ್ಷಪಾತ ಅಥವಾ ಲೋಪಗಳಾಗಿರಲಿಲ್ಲ ಎಂದು ಕಾಂಗ್ರೆಸ್ ಪಕ್ಷದಿಂದ ಮತ ಎಣಿಕೆಯ ಏಜೆಂಟ್ ಆಗಿದ್ದ ಸುಧೀರ್‌ಕುಮಾರ್ ಮುರೊಳ್ಳಿ ದೇವರ ಮುಂದೆ ಪ್ರಮಾಣ ಮಾಡಿದ್ದಾರೆ.**

ಇಂದು ಬೆಳಗ್ಗೆ ಟಿ.ಡಿ.ರಾಜೇಗೌಡ ಹಾಗೂ ಪಕ್ಷದ ಇತರ ಮುಖಂಡರ ಜೊತೆಯಲ್ಲಿ ಶೃಂಗೇರಿ ಕ್ಷೇತ್ರದ ಕೊಪ್ಪದ ಅಧಿದೇವತೆ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿ, ಪ್ರದಕ್ಷಿಣೆ ಬಳಿಕ ಪ್ರಮಾಣ ಮಾಡಿದ್ದಾರೆ. 2023ರ ಮೇ 13ರಂದು ನಡೆದ ಶೃಂಗೇರಿ ಕ್ಷೇತ್ರದ ಮತ ಎಣಿಕೆಯಲ್ಲಿ ಎಟಿಬಿಪಿಎಸ್, ಅಂಚೆ ಮತಪತ್ರ ಹಾಗೂ ಎಲೆಕ್ಟ್ರಾನಿಕ್ ಮತಪತ್ರ ಗಳು ಎಂಬ ಮೂರು ರೀತಿಯ ಮತಗಳ ಎಣಿಕೆ ಯಾಯಿತು. ಜೆಡಿಎಸ್‌ನ ಅಭ್ಯರ್ಥಿ ಸುಧಾಕರ್ ಶೆಟ್ಟಿ ಮತ್ತು ಅದೇ ಪಕ್ಷದ ಏಜೆಂಟ್ ಕಣಿವೆ ವಿನಯ್, ಬಿಜೆಪಿಯ ಏಜೆಂಟ್ ಬಿ.ಎಸ್.ಸತೀಶ್, ಕಾಂಗ್ರೆಸ್ ಏಜೆಂಟಾಗಿದ್ದ ತಾವು ಹಾಗೂ ಪಕ್ಷೇತರ ಅಭ್ಯರ್ಥಿಗಳು ಮತ್ತು ಅವರ ಏಜೆಂಟರಿಗೆ ಅಂದಿನ ಸಹಾಯಕ ಚುನಾವಣಾಧಿಕಾರಿಗಳು ಮತ ಪತ್ರಗಳನ್ನು ತೋರಿಸಿ ಆಯಾ ಅಭ್ಯರ್ಥಿಗಳ ಮತ ಬುಟ್ಟಿಗೆ ಹಾಕಿದ್ದರು.

ಆ ಸಂದರ್ಭದಲ್ಲಿ 279 ಮತಗಳು ಅಮಾನ್ಯಗೊಂಡಿದ್ದವು. ಕಾಂಗ್ರೆಸ್‌ಗೆ 201 ಮತಗಳ ಮುನ್ನಡೆಯಿದೆ ಎಂದು ಖಚಿತವಾದ ಬಳಿಕ ಟಿ.ಡಿ.ರಾಜೇಗೌಡ ಅವರು ಮತ ಎಣಿಕೆ ಕೇಂದ್ರದ ಒಳಗೆ ಬಂದರು ಎಂದು ವಿವರಿಸಿದರು. ಮತ ಎಣಿಕೆ ಸಂದರ್ಭದಲ್ಲೇ ತಿರಸ್ಕೃತವಾದ 279 ಅಂಚೆ ಮತಗಳ ಮರು ಎಣಿಕೆಗೆ ಬಿಜೆಪಿಯ ಅಭ್ಯರ್ಥಿ ಡಿ.ಎನ್.ಜೀವರಾಜ್ ಮನವಿ ಮಾಡಿದ್ದರು. ಆದರೆ ಚುನಾವಣಾಧಿಕಾರಿಗಳು ಸಮತಿಸಲಿಲ್ಲ. ನಂತರ ಅವರು 19 ವಿವಾದಿತ ಅಂಶಗಳನ್ನು ಪ್ರಸ್ತಾಪಿಸಿ ಹೈಕೋರ್ಟ್ ಮೊರೆ ಹೋಗಿದ್ದರು. ನ್ಯಾಯಾಲಯ 279 ಅಮಾನ್ಯಗೊಂಡ ಮತಗಳ ಮರು ಎಣಿಕೆಗೆ ನಿರ್ದೇಶನ ನೀಡಿತ್ತು.

ಒಂದು ವೇಳೆ ನಾವು ತಪ್ಪು ಮಾಡಿದ್ದೇ ಆಗಿದ್ದರೆ, ಹೈಕೋರ್ಟ್ ತೀರ್ಪನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿ ಕಾಲಹರಣ ಮಾಡಬಹುದಿತ್ತು. ಆದರೆ ನಮಗೆ ಅಂತಹ ಯಾವ ಉದ್ದೇಶಗಳೂ ಇರಲಿಲ್ಲ. ಟಿ.ಡಿ.ರಾಜೇಗೌಡ ಅವರು 201 ಮತಗಳ ಅಂತರದಲ್ಲಿ ಪ್ರಾಮಾಣಿಕವಾಗಿ ಗೆಲುವು ಕಂಡಿದ್ದರು ಎಂದು ವಿವರಿಸಿದರು. ಇತ್ತೀಚೆಗೆ ಮೇ 2 ರಂದು ನಡೆದ ಮರು ಮತ ಎಣಿಕೆಯಲ್ಲಿ 2023ರಲ್ಲಿ ತಿರಸ್ಕೃತಗೊಂಡಿದ್ದ 279 ಮತಗಳ ಪೈಕಿ 8 ಮತಗಳುಮಾನ್ಯಗೊಂಡಿದ್ದವು. ಅದರಲ್ಲೂ ರಾಜೇಗೌಡರಿಗೆ 3, ಜೀವರಾಜ್ ಅವರಿಗೆ 2 ಮತಗಳು ಮತ್ತು ಉಳಿದವು ಪಕ್ಷೇತರ ಅಭ್ಯರ್ಥಿಗಳಿಗೆ ಸಲ್ಲಿಕೆಯಾಗಿದ್ದವು.

ಮರು ಮತ ಎಣಿಕೆಯಲ್ಲೂ ರಾಜೇಗೌಡ ಅವರು ಜೀವರಾಜ್‌ಗಿಂತ ಒಂದು ಮತ ಹೆಚ್ಚು ಪಡೆದಿದ್ದರು ಎಂದು ವಿವರಿಸಿದ್ದಾರೆ. ಮುಂದುವರೆದ ಮತ ಎಣಿಕೆಯಲ್ಲಿ ಮೊದಲನೇ ಬಂಡಲ್ ಅನ್ನು ಬಿಚ್ಚಿದ್ದಾಗ 25 ಮತಗಳು, 2ನೇ ಬಂಡಲ್‌ನಲ್ಲಿ 170, 3ನೇ ಬಂಡಲ್‌ನಲ್ಲಿ 25, 4ನೇ ಬಂಡಲ್‌ನಲ್ಲಿ 7 ಮತಗಳು ಮಲ್ಟಿಪಲ್ ಎಂಟ್ರಿಯಾಗಿ ಸಾರಸಗಟಾಗಿ ಅಮಾನ್ಯಗೊಂಡಿವೆ. ಅಷ್ಟು ಬಂಡಲ್‌ಗಳು ಯಾವುದೇ ಸೀಲ್‌ಗಳಿಲ್ಲದೇ ಮುಕ್ತವಾಗಿದ್ದವು ಎಂದು ಸುಧೀರ್‌ಕುಮಾರ್ ಮುರೊಳ್ಳಿ ಪ್ರಮಾಣ ಮಾಡಿದ್ದಾರೆ. 2023ರಲ್ಲಿ ಟಿ.ಡಿ.ರಾಜೇಗೌಡ ಅವರ ಗೆಲುವ ಪ್ರಾಮಾಣಿಕವಾಗಿತ್ತು.

## ಲಾರಿಗೆ ಕಾರು ಡಿಕ್ಕಿ: ರಸ್ತೆಯಲ್ಲೇ ಪ್ರಾಣಬಿಟ್ಟ ನಾಲ್ವರು

**ನೈಜ್ಯ ದೆಸೆ ನ್ಯೂಸ್**

**ತುಮಕೂರು: ಜಿಲ್ಲೆಯ ಕುಣಿಗಲ್ ತಾಲೂಕಿನ ಹೊನ್ನೇನಹಳ್ಳಿ ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನಿಯಂತ್ರಣ ತಪ್ಪಿದ ಆಲ್ಟೋ ಕಾರು ಗೊಬ್ಬರ ತುಂಬಿದ್ದ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ.**



ಮಂಡ್ಯ ಮೂಲದ ನಾಲ್ವರು ಪ್ರಯಾಣಿಸುತ್ತಿದ್ದ ಆಲ್ಟೋ ಕಾರು ಹೊನ್ನೇನಹಳ್ಳಿ ಬಳಿ ಚಲಿಸುತ್ತಿದ್ದಾಗ ಲಾರಿಗೆ ಅತೀ ವೇಗವಾಗಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಕಾರಿನಲ್ಲಿದ್ದ ಕುಮಾರಸ್ವಾಮಿ, ಗಾಯತ್ರಿ ಸೇರಿದಂತೆ ನಾಲ್ವರು ತೀವ್ರ ರಕ್ತಸ್ರಾವದಿಂದ ರಸ್ತೆಯಲ್ಲೇ ಕೊನೆಯುಸಿರೆಳೆದಿದ್ದಾರೆ. ಅಪಘಾತದ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆಯೇ ಕುಣಿಗಲ್ ಠಾಣೆಯ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ನಾಯಕ ವಾಲ್ಮೀಕಿ ಜನಾಂಗಕ್ಕೆ ಮಾತ್ರ ಎಸ್ ಟಿ ಸೌಲಭ್ಯ; ನಕಲಿ ಪ್ರಮಾಣಪತ್ರಗಳ ವಿರುದ್ಧ

# ಕ್ರಮಕ್ಕೆ ಸೂಚನೆ: ಶ್ರವಣಕುಮಾರ.ಡಿ ನಾಯಕ




**ನೈಜ್ಯ ದೆಸೆ ನ್ಯೂಸ್**

ಕಲಬುರಗಿ: ಜಿಲ್ಲೆಯಲ್ಲಿ ನಾಯಕ ವಾಲ್ಮೀಕಿ ಜನಾಂಗದಲ್ಲಿ ಬರುವ "ನಾಯಕ ತಳವಾರ" ಜಾತಿವ-ರಿಗೆ ಮಾತ್ರ ಎಸ್‌ಟಿ ಪ್ರಮಾಣ ಪತ್ರ ನೀಡಬೇಕು ಹಾಗೂ ಹಿಂದುಳಿದ ವರ್ಗದಲ್ಲಿ ಬರುವ "ತಳವಾರ" ಜಾತಿವರಿಗೆ ಯಾವುದೇ ಕಾರಣಕ್ಕೂ ಎಸ್‌ಟಿ ಪ್ರಮಾಣ ಪತ್ರಗಳನ್ನು ನೀಡಬಾರದು ಎಂದು ಸರ್ಕಾರದ ಆದೇಶಗಳನ್ನು ಉಲ್ಲೇಖಿಸಿ ಜಿಲ್ಲಾಧಿಕಾರಿ ಶ್ರವಣಕುಮಾರ ಡಿ ನಾಯಕ ಅವರು ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಜಿಲ್ಲೆಯಲ್ಲಿ ನಾಯಕ ವಾಲ್ಮೀಕಿ ಜನಾಂಗಕ್ಕೆ ಸೇರಿದ ತಳವಾರ ಜಾತಿವರು ಇರುವುದಿಲ್ಲ. ಇಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ತಳವಾರ ಸಮುದಾಯವೇ ಹೆಚ್ಚಿದ್ದು, ಇವರಿಗೆ ಎಸ್‌ಟಿ ಪ್ರಮಾಣ ಪತ್ರ ನೀಡುವುದು ಕಾನೂನುಬಾಹಿರವಾಗಿದೆ ಎಂದು ತಿಳಿಸಲಾಗಿದೆ. ಈ ಕುರಿತು ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದ್ದು, ಹೈಕೋರ್ಟ್ ಸಹ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ರದ್ದುಪಡಿಸಬೇಕೆಂದು ಆದೇಶ ನೀಡಿದೆ.

ರಾಜ್ಯ ಸರ್ಕಾರವೂ ಸೆಕ್ಷನ್ 4ಈ ಅಡಿಯಲ್ಲಿ ಇಂತಹ ಪ್ರಮಾಣ ಪತ್ರಗಳಿಗೆ ತಾತ್ಕಾಲಿಕ ತಡೆ ನೀಡಲು ಸೂಚಿಸಿದ್ದರೂ, ಜಿಲ್ಲಾಡಳಿತ ಮಟ್ಟದಲ್ಲಿ ಪೂರ್ಣ ಪಾಲನೆ ಆಗಿಲ್ಲ ಎಂಬ ಆರೋಪ ಕೇಳಿಬಂದಿದೆ. ಈ ಹಿನ್ನೆಲೆ, ಮೇ 7, 2026 ರಂದು ಹೊರಡಿಸಿದ ಆದೇಶದಲ್ಲಿ ಜಿಲ್ಲಾಧಿಕಾರಿಗಳು ಎಲ್ಲಾ ತಹಸೀಲ್ದಾರ-ರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಸರ್ಕಾರದ ನಿಯಮಾವಳಿಗಳ ಪ್ರಕಾರ ಮಾತ್ರ ಜಾತಿ ಪ್ರಮಾಣ ಪತ್ರಗಳನ್ನು ನೀಡಬೇಕು ಎಂದು ತಿಳಿಸಿದ್ದಾರೆ.

ಹಿಂದುಳಿದ ವರ್ಗಕ್ಕೆ ಸೇರಿದ ತಳವಾರ ಜಾತಿವರು "ನಾಯ್ಕಡ" ಅಥವಾ "ನಾಯಕ ತಳವಾರ" ಎಂಬ ಹೆಸರಿನಲ್ಲಿ ಯಾವುದೇ ಕಾರಣಕ್ಕೂ ಎಸ್‌ಟಿ ಪ್ರಮಾಣ ಪತ್ರ ಪಡೆಯದಂತೆ ಎಚ್ಚರಿಕೆ ನೀಡಲಾಗಿದೆ. ರಾಜ್ಯ ಎಸ್‌ಸಿ/ಎಸ್‌ಟಿ ನಕಲಿ ಜಾತಿ ಪ್ರಮಾಣ ಪತ್ರ ತಡೆ ಸಮಿತಿಯ ರಾಜ್ಯಾಧ್ಯಕ್ಷ ಶ್ರವಣಕುಮಾರ ಡಿ ನಾಯಕ ಅವರು ಕೂಡ ಈ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಮನವಿ ಮಾಡಿದ್ದಾರೆ.

## ಬಸವೇಶ್ವರ ಸಮುದಾಯ ಭವನ ಭೂಮಿ ಪೂಜೆ.

**ನೈಜ್ಯ ದೆಸೆ ನ್ಯೂಸ್**



**ಬಸಪಟ್ಟಣ: ಮದಲಮಟ್ಟಿ ಗ್ರಾಮದಲ್ಲಿ ಬಸವೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಭಕ್ತಿಪೂರ್ವಕ ಕಾರ್ಯಕ್ರಮ ಸಿದ್ದು ಸವದಿ ನೆರವೇರಿಸಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಗ್ರಾಮೀಣ ಭಾಗದ ಸಮುದಾಯ ಭವನಗಳ ನಿರ್ಮಾಣದಿಂದ ಸಾರ್ವಜನಿಕ ಕಾರ್ಯಕ್ರಮಗಳು, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸಮಾಜದ ಸಭೆಗಳಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ಸರ್ಕಾರದಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ.

ಈ ಕಾರ್ಯಕ್ರಮದಲ್ಲಿ ಗ್ರಾಮದ, ಬಾಬುಗೌಡ ಪಾಟೀಲ ಶಂಕರ ಮಲ್ಲನವರ ಬಸು ಮಲ್ಲನವರ ದಯಾನಂದ ಮಗದುಮ ಸಂಗಮೇಶಗೌಡ ಪಾಟೀಲ ಮತ್ತು ಬಸವೇಶ್ವರ ಭಕ್ತರು, ವಿವಿಧ ಸಂಘಟನೆಗಳ ಪದಾಧಿಕಾ-ರಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದರು.

## ಮೆ.11 ರಂದು ನಡೆಯಬೇಕಿದ್ದ ತಳವಾರ ಪರಿವಾರ ಸಮುದಾಯದ

## ಹೋರಾಟ ಹಿಂಪಡೆಯಲಾಗಿದೆ: ಸಂತೋಷ ತಳವಾರ

**ನೈಜ್ಯ ದೆಸೆ ನ್ಯೂಸ್**

**ಅಫಜಲಪುರ: ಮೆ.12 ರಂದು ನಮ್ಮ ತಳವಾರ ಸಮುದಾಯಕ್ಕೆ ಎಸ್.ಟಿ ಪ್ರಮಾಣ ಪತ್ರ ನೀಡುವ ಕುರಿತು ಪಟ್ಟಣದ ತಹಶೀಲ್ದಾರ ಕಚೇರಿ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು ಕಾರಣ ನಾವು ಅಖಿಲ ಕರ್ನಾಟಕ ಮಹರ್ಷಿ ವಾಲ್ಮೀಕಿ ತಳವಾರ ಸಮಾಜ ಸಂಘ (ರಿ) ವತಿಯಿಂದ ಹಮ್ಮಿಕೊಂಡ ಪ್ರತಿಭಟನೆ ಹಿಂಪಡೆಯಲಾಗಿದೆ.ಎಂದು ಸಂತೋಷ**



ತಳವಾರ ತಿಳಿಸಿದ್ದಾರೆ.

ನಂತರ ಮಾತನಾಡಿದ ಅವರು ಮೇ.9;2026 ರಂದು ಮಾನ್ಯ ಜಿಲ್ಲಾಧಿಕಾರಿಗಳು ಕಲಬುರಗಿ ರವರು ಸಭೆ ಕೈಗೊಂಡು ಮೂಲ ತಳವಾರ ಸಮುದಾಯದವರಿಗೆ ಎಸ್.ಟಿ ಪ್ರಮಾಣ ಪತ್ರ ನೀಡಬೇಕೆಂದು ಆದೇಶ ಮಾಡಿರುತ್ತಾರೆ.ಕಾರಣ ನಾವು ಮೇ. 11; 2026 ರಂದು ಮಾಡಬೇಕಿದ್ದ ಪ್ರತಿಭಟನೆ ಹಿಂಪಡೆಯುತ್ತಿದ್ದು ನಾವು ಸದರಿ ದಿನದಂದು ಪ್ರತಿಭಟನೆ ಮಾಡುವುದಿಲ್ಲ ಎಂದರು.

# ತಳವಾರ ಸಮುದಾಯಕ್ಕೆ ಎಸ್‌ಟಿ ಪ್ರಮಾಣ ಪತ್ರ ವಿತರಣೆಗೆ

**ನೈಜ್ಯ ದೆಸೆ ನ್ಯೂಸ್**



**ಕಲಬುರಗಿ: ತಳವಾರ ಸಮುದಾಯಕ್ಕೆ ಪರಿಶಿಷ್ಟ ಪಂಗಡ (ಎಸ್‌ಟಿ) ಜಾತಿ ಪ್ರಮಾಣ ಪತ್ರ ವಿತರಿಸುವ ಕುರಿತು ಕಲಬುರಗಿ ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲಾ ತಹಶೀಲ್ದಾರರಿಗೆ ಮಹತ್ವದ ನಿರ್ದೇಶನ ನೀಡಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಆದೇಶಗಳು ಹಾಗೂ ಸುತ್ತೋಲೆಗಳನ್ನು ಕಡ್ಡಾಯವಾಗಿ ಪಾಲಿಸಿ ಅರ್ಹರಿಗೆ ಎಸ್‌ಟಿ ಪ್ರಮಾಣ ಪತ್ರ ವಿತರಿಸುವಂತೆ ಸೂಚಿಸಿದ್ದಾರೆ.**

ನಾಯ್ಕಡ, ನಾಯಕ (ಪರಿವಾರ ಮತ್ತು ತಳವಾರ ಸೇರಿ) ಸಮುದಾಯಕ್ಕೆ ನಿಯಮಾನುಸಾರ ಎಸ್‌ಟಿ ಪ್ರಮಾಣ ಪತ್ರ ನೀಡಿ ತಹಶೀಲ್ದಾರರಿಗೆ ಜಿಲ್ಲಾಧಿಕಾರಿಗಳ ಆದೇಶ ಅಫಜಲಪುರ, ಆಳಂದ, ಚಿತ್ತಾಪುರ, ಚಿಂಚೋಳಿ, ಜೇವರ್ಗಿ, ಕಲಬುರಗಿ, ಕಾಳಗಿ, ಕಮಲಾಪುರ, ಸೇಡಂ, ಶಹಾಬಾದ್ ಹಾಗೂ ಯಡ್ರಾಮಿ ತಾಲ್ಲೂಕಿನ ತಹಶೀಲ್ದಾರರಿಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಈ ಕುರಿತು ಅಧಿಕೃತ ಪತ್ರ ರವಾನಿಸಲಾಗಿದೆ.

ಜಿಲ್ಲಾಧಿಕಾರಿಗಳ ಪತ್ರದಲ್ಲಿ ಉಲ್ಲೇಖಿಸಿರುವಂತೆ, ``The Constitution (Scheduled Tribes) Order (Amendment) Act, 2020'' ಅನ್ವಯ ``Naikda, Nayaka'' ಎಂಬ ಪದಗಳ ಜೊತೆಗೆ ``including Parivara and Talawara'' ಎಂಬ ಪದಗಳನ್ನು ಸೇರಿಸಲಾಗಿದ್ದು, ಪರಿವಾರ ಹಾಗೂ ತಳವಾರ ಸಮುದಾಯದವ-ರಿಗೂ ಪರಿಶಿಷ್ಟ ಪಂಗಡದ ಸ್ಥಾನಮಾನ ಅನ್ವಯವಾಗುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ಇದಕ್ಕೆ ಸಂಬಂಧಿಸಿದಂತೆ 2020ರಿಂದ 2025ರವರೆಗೆ ರಾಜ್ಯ ಸರ್ಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಲಾದ ವಿವಿಧ ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಉಲ್ಲೇಖಿಸಿರುವ ಜಿಲ್ಲಾಧಿಕಾರಿಗಳು, ಜಾತಿ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಸರ್ಕಾರ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸೂಚಿಸಿದ್ದಾರೆ. ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಅಧಿನಿಯಮ 1990 ಹಾಗೂ ನಿಯಮಗಳು 1992ರ ಅನ್ವಯ ತಹಶೀಲ್ದಾರರು ಜಾತಿ ಪ್ರಮಾಣ ಪತ್ರ ನೀಡುವ ಪ್ರಾಧಿಕಾರಿಗಳಾಗಿದ್ದು,

``Naikda, Nayaka (including Parivara and Talawara)'' ಸಮುದಾಯದ ಅರ್ಹ ಅಭ್ಯರ್ಥಿಗಳಿಗೆ ನೈಜತೆ ಪರಿಶೀಲಿಸಿ ನಿಯಮಾನುಸಾರ ಎಸ್‌ಟಿ ಪ್ರಮಾಣ ಪತ್ರ ವಿತರಿಸಬೇಕು ಎಂದು ನಿರ್ದೇಶಿಸಲಾಗಿದೆ. ಜಿಲ್ಲಾಧಿಕಾರಿಗಳ ಈ ಕ್ರಮದಿಂದ ಹಲವು ವರ್ಷಗಳಿಂದ ಎಸ್‌ಟಿ ಪ್ರಮಾಣ ಪತ್ರಕ್ಕಾಗಿ ಹೋರಾಟ ನಡೆಸುತ್ತಿರುವ ತಳವಾರ ಸಮುದಾಯದ ಜನರಲ್ಲಿ ಹೊಸ ನಿರೀಕ್ಷೆ ಮೂಡಿದೆ.

## ಸಾಹಿತ್ಯ ಸಿಂಚನ

ತಾಯಿ
ತಾಯಿ ಎಂದರೆ ಮಮತೆಯ ಸಾಗರ,
ನನ್ನ ಬದುಕಿನ ಮೊದಲ ಆದರ.
ಕಣ್ಣೀರಲ್ಲಿ ನಗು ಮೂಡಿಸುವಳು,
ಬೇಸರದಲಿ ಬೆಳಕು ತರುವಳು.

ನನ್ನ ಮೊದಲ ಮಾತಿನ ಗುರು ಅವಳು,
ನನ್ನ ಮೊದಲ ಹೆಜ್ಜೆಯ ಬೆಂಬಲ ಅವಳು.
ನಾನು ಬೀಳುವಾಗ ಕೈ ಹಿಡಿಯುವಳು,
ನಿಶ್ಯಬ್ದವಾಗಿ ನೋವು ಹೊರುವಳು.

ಹಸಿವಾದಾಗ ಅನ್ನವಾಗುವಳು,
ಭಯವಾದಾಗ ಧೈರ್ಯವಾಗುವಳು.
ಜಗವೆಲ್ಲ ದೂರವಾದರೂ,
ತಾಯಿ ಮಾತ್ರ ಜೊತೆ ನಿಲ್ಲುವಳು.

ತಾಯಿಯ ಪ್ರೀತಿ ದೇವರ ಕೃಪೆ,
ಅವಳ ಹೃದಯವೇ ನಿಜವಾದ ದೀಪ.
ಜೀವನವೆಂಬ ದಾರಿಗೆ ಬೆಳಕು,
ತಾಯಿ ನನ್ನ ಶಾಶ್ವತ ಆಶ್ರಯವು.

ಅಮರೇಶ್

## ದಳಪತಿ ವಿಜಯ್ ಪಟ್ಟಾಭಿಷೇಕಕ್ಕೆ ಬಿಡದ ಗ್ರಹಣ :ಡಿಸಿಎಂ ಸ್ಥಾನಕ್ಕೆ ವಿಸಿಕೆ ಪಟ್ಟು

ನೈಜ್ಯ ದೆಸೆ ನ್ಯೂಸ್

**ಚೆನ್ನೈ: ಬೆಂಬಲ ಬೇಕೇ ಹಾಗಾದರೆ ನಮ ಪಕ್ಷಕ್ಕೆ ಡಿಸಿಎಂ ಪಟ್ಟು ಬಿಟ್ಟುಕೊಡಿ ಎಂದು ವಿಸಿಕೆ ಪಕ್ಷ ಪಟ್ಟು ಹಿಡಿದಿರುವುದರಿಂದ ತಮಿಳುನಾಡಿನಲ್ಲಿ ದಳಪತಿ ವಿಜಯ್ ಪಟ್ಟಾಭಿಷೇಕಕ್ಕೆ ಮತ್ತೆ ಹಿನ್ನಡೆಯಾಗಿದೆ. ವಿಜಯ್ ಮತ್ತು ರಾಜ್ಯಪಾಲರ ನಡುವಿನ ಜಿದ್ದಾಜಿದ್ದಿನಿಂದಾಗಿ ತಮಿಳುನಾಡು ರಾಜಕೀಯ ಮತ್ತಷ್ಟು ರೋಚಕ ತಿರುವು ಪಡೆದುಕೊಂಡಿದೆ. ಇಂದು ಮೂರನೇ ಬಾರಿಗೆ ರಾಜ್ಯಪಾಲರನ್ನು ಭೇಟಿ ಮಾಡಿದ ವಿಜಯ್, ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರೂ ಬಹುಮತದ ಮ್ಯಾಜಿಕ್ ನಂಬರ್ ಸಾಬೀತುಪಡಿಸಲೇ ಬೇಕು ಎಂದು ಆರ್ಲೇಕರ್ ಹೇಳಿ ಕಳುಹಿಸಿದ್ದಾರೆ.**



ಟಿವಿಕೆ ಅಧ್ಯಕ್ಷ ವಿಜಯ್ ಅವರು ಇಂದು ರಾಜಭವನದಲ್ಲಿ ರಾಜ್ಯಪಾಲ ಆರ್.ವಿ. ಅರ್ಲೇಕರ್ ಅವರನ್ನು ಭೇಟಿಯಾಗಿ, ತಮ್ಮ ಬಳಿ 116 ಶಾಸಕರ ಬೆಂಬಲವಿದೆ ಎಂದು ಪತ್ರ ಸಲ್ಲಿಸಿದ್ದಾರೆ. ಆದರೆ ತಮಿಳುನಾಡು ವಿಧಾನಸಭೆಯ ಒಟ್ಟು 234 ಸ್ಥಾನಗಳಲ್ಲಿ ಬಹುಮತ ಸಾಬೀತುಪಡಿಸಲು 118 ಶಾಸಕರ ಅಗತ್ಯವಿದೆ. ಅದನ್ನು ತನ್ನಿ ಎನ್ನುವುದು ರಾಜ್ಯಪಾಲರ ವಾದವಾಗಿದೆ. ಕಾಂಗ್ರೆಸ್‌ನ ಐದು, ಎಡಪಕ್ಷಗಳ ನಾಲ್ಕು ಸದಸ್ಯರ ಬೆಂಬಲ ಪಡೆದಿರುವ ಟಿವಿಕೆಗೆ ಇಬ್ಬರು ಶಾಸಕರನ್ನು ಹೊಂದಿರುವ ವಿಸಿಕೆ ಪಕ್ಷ ಕೊನೆಗೂ ಬೆಂಬಲ ನೀಡಿದೆ. ಆದರೆ ನಮ ಈ ತ್ಯಾಗಕ್ಕಾಗಿ ನಮ ಪಕ್ಷಕ್ಕೆ ಉಪ ಮುಖ್ಯಮಂತ್ರಿ ಪಟ್ಟ ಬಿಟ್ಟುಕೊಡುವಂತೆ ಆ ಪಕ್ಷ ಪಟ್ಟು ಹಿಡಿದಿದೆ. ಅವರ ಬೇಡಿಕೆಗೆ ವಿಜಯ್ ಕಡೆಯಿಂದ ಯಾವುದೇ ಒಪ್ಪಿಗೆ ಸಿಕ್ಕಿಲ್ಲ. ಹೀಗಾಗಿ ಇಲ್ಲಿಯವರೆಗೆ ವಿಸಿಕೆ ತನ್ನ ನಿರ್ಧಾರವನ್ನು ಅಧಿಕೃತವಾಗಿ ಘೋಷಣೆ ಮಾಡಿಲ್ಲ. ಉಲ್ಟಾ ಹೊಡೆದ ಐಯುಎಂಎಲ್; ಈ ಹಿಂದೆ ಟಿವಿಕೆ ಬೆಂಬಲ ನೀಡಬಹುದು ಎನ್ನಲಾಗಿದ್ದ ಇಂಡಿಂ-ಯನ್ ಯೂನಿಯನ್ ಮುಸ್ಲಿಂ ಲೀಗ್ ಈಗ ಉಲ್ಟಾ ಹೊಡೆದಿದೆ.ನಮ್ಮದು ಸಿದ್ಧಾಂತದ ಮೈತ್ರಿ, ಡಿಎಂಕೆಯನ್ನು ಬಿಟ್ಟು ಬೇರೆ ಯಾರನ್ನೂ ಬೆಂಬಲಿಸುವುದಿಲ್ಲ ಎಂದು ಆ ಪಕ್ಷ ಘೋಷಿಸಿರುವುದು ವಿಜಯ್ ಲೆಕ್ಕಾಚಾರವನ್ನು ತಲೆಕೆಳಗಾಗಿಸಿದೆ. ಒಂದು ವೇಳೆ ವಿಸಿಕೆ ಬೆಂಬಲ ನೀಡದಿದ್ದರೆ, ವಿಜಯ್ ಅವರು ಬೇರೆ ಪಕ್ಷಗಳ ಶಾಸಕರ ಮೊರೆ ಹೋಗಬೇಕಾಗುತ್ತದೆ. ಇಲ್ಲವಾದಲ್ಲಿ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಅಥವಾ ಮೈತ್ರಿಗೆ ಮುನ್ನುಡಿ ಹಾಡಬೇಕಾಗುತ್ತದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

# ಅಂತರಾಷ್ಟ್ರೀಯ ಪವರ್ ಲಿಫ್ಟಿಂಗ್ ಕಾಮನ್ವೆಲ್ತ್ ಚಾಂಪಿಯನ್ಶಿಪ್‌ಗೆ ಆಯ್ಕೆ

## ಕೆಪಿಸಿಸಿ ಕಾರ್ಮಿಕ ದಿನಾಚರಣೆಯಲ್ಲಿ ಕ್ರೀಡಾಪಟು ಸಚಿನ್ ತುಕಾರಾಮ ಸಾಳುಂಕೆ ಸನ್ಮಾನ


ನೈಜ್ಯ ದೆಸೆ ನ್ಯೂಸ್


**ಬೆಂಗಳೂರು: ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಅಂಗವಾಗಿ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಲಾದ ವಿಶೇಷ ಕಾರ್ಯಕ್ರಮದಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯಸಭಾ ಸದಸ್ಯ ಚಂದ್ರಶೇಖರ್, ಹಾಗೂ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷ ಪುಟ್ಟಸ್ವಾಮಿ ಗೌಡ ಅವರು ರಾಷ್ಟ್ರಮಟ್ಟದ ಕ್ರೀಡಾಪಟು ಸಚಿನ್ ತುಕಾರಾಮ ಸಾಳುಂಕೆ ಅವರನ್ನು ಸನ್ಮಾನಿಸಿದರು.**

ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಯಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಸಚಿನ್ ಸಾಳುಂಕೆ ಅವರು 2026ರ ಸೆಪ್ಟೆಂಬರ್ 16 ರಿಂದ 27ರವರೆಗೆ ಕೆನಡಾದಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಪವರ್ ಲಿಫ್ಟಿಂಗ್ ಕಾಮನ್ವೆಲ್ತ್ ಚಾಂಪಿಯನ್ಶಿಪ್ಗೆ ಭಾರತ ದೇಶದಿಂದ ಆಯ್ಕೆಯಾಗಿರುವುದು ಜಿಲ್ಲೆಯ ಹೆಮ್ಮೆಯ ವಿಷಯವಾಗಿದೆ.

?? ಕ್ರೀಡಾ ಸಾಧನೆಯ ಸಂಕ್ಷಿಪ್ತ ಪರಿಚಯ
ಹೆಸರು: ಸಚಿನ್ ತುಕಾರಾಮ ಸಾಳುಂಕೆ
ಮೂಲ ಊರು: ತಿಗಣಿಬಿದರಿ ಗ್ರಾಮ, ಬಬಲೇಶ್ವರ ತಾಲ್ಲೂಕು, ವಿಜಯಪುರ ಜಿಲ್ಲೆ
ವಾಸಸ್ಥಳ: ಹುಬ್ಬಳ್ಳಿ ? ಧಾರವಾಡ
ಶಿಕ್ಷಣ: ಡಿಗ್ರಿ
ಸೇವೆಗಳು:
1 ವರ್ಷ ಸ್ಕೌಟ್
3 ವರ್ಷ NCC
ರಾಷ್ಟ್ರಮಟ್ಟದ ಕ್ರೀಡಾಪಟು








ಕೆಪಿಸಿಸಿ ಕಾರ್ಮಿಕ ವಿಭಾಗ ರಾಜ್ಯ ಜಂಟಿ ಕಾರ್ಯದರ್ಶಿ
ರಾಜ್ಯ ಮಟ್ಟದ ಸಾಧನೆ (ಹ್ಯಾಮರ್ ಥ್ರೋ)
2016 ? ಬೀದರ್ : ಪ್ರಥಮ ಸ್ಥಾನ
2017 ? ಬೆಂಗಳೂರು : ಪ್ರಥಮ ಸ್ಥಾನ
2017 ? ಬಾಗಲಕೋಟೆ : ಪ್ರಥಮ ಸ್ಥಾನ
2018 ? ಮಂಗಳೂರು : ಪ್ರಥಮ ಸ್ಥಾನ
2019 ? ಉಡುಪಿ : ಪ್ರಥಮ ಸ್ಥಾನ
2021 ? ಉಡುಪಿ : ಪ್ರಥಮ ಸ್ಥಾನ
??? ಪವರ್ ಲಿಫ್ಟಿಂಗ್ ರಾಜ್ಯ ಮಟ್ಟ
2022 ? ಬೆಂಗಳೂರು : ಪ್ರಥಮ ಸ್ಥಾನ
2023 ? ಉಡುಪಿ : ಪ್ರಥಮ ಸ್ಥಾನ
2024 ? ಹಾಸನ್ : ಪ್ರಥಮ ಸ್ಥಾನ
2025 ? ಮಂಗಳೂರು : ಪ್ರಥಮ ಸ್ಥಾನ
2026 ? ಮಂಗಳೂರು : ಪ್ರಥಮ ಸ್ಥಾನ
???? ರಾಷ್ಟ್ರ ಮಟ್ಟದ ಸಾಧನೆ
ಹ್ಯಾಮರ್ ಥ್ರೋ
2016 ? ರಾಂಚಿ (ಜಾರ್ಖಂಡ್)
2017 ? ಹೈದರಾಬಾದ್ : ದ್ವಿತೀಯ ಸ್ಥಾನ
2018 ? ಕೇರಳ: ದ್ವಿತೀಯ ಸ್ಥಾನ
ಮಂಗಳೂರು ವಿಶ್ವವಿದ್ಯಾಲಯ
2019 ? ದ್ವಿತೀಯ ಸ್ಥಾನ
2021 ? ಪ್ರಥಮ ಸ್ಥಾನ
2022 ? ಪ್ರಥಮ ಸ್ಥಾನ
ಪವರ್ ಲಿಫ್ಟಿಂಗ್
2022 ? ದೆಹಲಿ: ಪ್ರಥಮ ಸ್ಥಾನ
2024 ? ಕಲ್ಕತ್ತಾ ಸೀನಿಯರ್ ನ್ಯಾಷನಲ್
2024 ? ಪೆಟ್ರೇಶನ್ ಕಪ್, ದೆಹಲಿ : ದ್ವಿತೀಯ ಸ್ಥಾನ
2025 ಹಿಮಾಚಲ ಪ್ರದೇಶ ಪೆಟ್ರೇಶನ್ ಕಪ್: ಪ್ರಥಮ ಸ್ಥಾನ
?? ಅಂತರಾಷ್ಟ್ರೀಯ ಸಾಧನೆ
2026ರ ಸೆಪ್ಟೆಂಬರ್ 16 ರಿಂದ 27ರವರೆಗೆ ಕೆನಡಾದಲ್ಲಿ ನಡೆಯಲಿರುವ ಪವರ್ ಲಿಫ್ಟಿಂಗ್ ಕಾಮನ್ವೆಲ್ತ್ ಚಾಂಪಿಯನ್ಶಿಪ್ಗೆ ಭಾರತ ತಂಡದಿಂದ ಅಧಿಕೃತವಾಗಿ ಆಯ್ಕೆಯಾಗಿದ್ದು, ರಾಜ್ಯದ ಕ್ರೀಡಾಭಿಮಾನಿಗಳಿಗೆ ಹೆಮ್ಮೆಯ ಕ್ಷಣವಾಗಿದೆ.
ಪ್ರತಿಕ್ರಿಯೆ "ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನಿರಂತರ ಸಾಧನೆ ಮಾಡಿದ ಕ್ರೀಡಾಪಟುಗಳು ಯುವಜನತೆಗೆ ಪ್ರೇರಣೆ" ಎಂದು ಕಾರ್ಯಕ್ರಮದಲ್ಲಿ ಗಣ್ಯರು ಅಭಿನಂದಿಸಿದರು.

## ಮೊದಲ ಹೆಜ್ಜೆಯಲ್ಲಿ ಎಕರೆಗೆ ಆರು ಕ್ವಿಂಟಲ್ ಎಳ್ಳು ಬೆಳದ ರೈತ ಮರಿಗೌಡ ಪಾಟೀಲ್ ಹರ್ಷ



ನೈಜ್ಯ ದೆಸೆ ನ್ಯೂಸ್

**ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎಂಬ ಸರ್ವಜ್ಞರ ಮಾತಿನಂತೆ, ಎಲ್ಲಾ ವಿದ್ಯೆಗಿಂತಲೂ ವ್ಯವಸಾಯ ಅತ್ಯುನ್ನತವಾದದ್ದು,ಏ-ಕೆಂದರೆ ಅದು ಹಸಿವನ್ನು ನಿಗಿಸುತ್ತದೆ,**

ಹಾಗೆ "ಕೃಷಿ ತೋ ನಾಸ್ತಿ ದುರ್ಭಿಕ್ಷಂ" ಕೃಷಿಯನ್ನು ನಂಬಿದವರು ಹಸಿದು ಸಾಯುವುದಿಲ್ಲ, ಬದುಕಿಗೆ ದಾರಿ ತೋ-ರಿಸುತ್ತದೆ ಎಂಬ ಆಶಯದಂತೆ ಹಾಲಾಪೂರ ಮರಿಗೌಡ ಮಾಲಿ ಪಾಟೀಲ ಎಂಬ ರೈತ ತಮ್ಮ ಹೊಲದಲ್ಲಿ ಬೇಸಿಗೆ ಬೆಳೆಗೆ ಎಳ್ಳುನ್ನು ಬೆಳೆಯುವ ಮೂಲಕ ವಿಭಿನ್ನತೆ ಮರೆದಿದ್ದಾರೆ, ಮೊದಲ ಬಾರಿಗೆ ಎರಡುವರೆ ಎಕರೆ ಎಳ್ಳು ಬಿತ್ತನೆ ಮಾಡಿ,ಆರಂಭದಲ್ಲಿ ಹೊಸ ಬದಲಾವಣೆ ತರುವುದರ ಮೂಲಕ ಯಶಸ್ವಿಯಾಗಿದ್ದು,ಒಂದು ಎಕರೆಗೆ ಐದುರಿಂದ ಆರು ಕ್ವಿಂಟಲ್ ಎಳ್ಳು ಬೆಳೆದಿದ್ದು,ಪ್ರಸ್ತುತ ಮಾರುಕಟ್ಟೆ ಕ್ವಿಂಟಲ್ ದರ 13000 ರೂಪಾಯಿ ಇದ್ದು,

ಎಕರೆಗೆ ಹತ್ತು ಸಾವಿರ ಖರ್ಚು ಮಾಡಿದ್ದು, ಅಧಿಕ ಲಾಭಾಂಶ ಬರುವ ಈ ಎಳ್ಳು ಬೆಳೆದು ಈ ಭಾಗದಲ್ಲಿ ಮಾದರಿ ರೈತರಾಗಿದ್ದು,ಅದಕ್ಕೆ ನಮ್ಮ ರೈತರು ಬರಿ ಭತ್ತ ಮಾತ್ರ ಬೆಳೆಯುವುದು ,ಆದರೆ ಲಾಭಾಂಶ ಬಹಳ ಕಡಿಮೆ,ಅದಕ್ಕೆ ಎಲ್ಲಾ ರೈತರು ಬೇಸಿಗೆ ಅವದಿಯಲ್ಲಿ ಇಂತಹ ಬೆಳೆ ಬಿತ್ತನೆ ಮಾಡಿ, ನಮ್ಮ ಭಾಗದ ಕೂಲಿಕಾರರು ಬೆಂಗಳೂರು, ಮಂಗಳೂರು ಗೆ ಹೋಗುವ ಬದಲು ಅವರಿಗೆ ಇಲ್ಲಿ ಕೆಲಸ ಸಿಗುತ್ತೆ, ಇದರಿಂದ ಎಲ್ಲರಿಗೂ ಅನುಕೂಲ ಮತ್ತು ಲಾಭ ಎಂದು ಮರಿಗೌಡ ಪಾಟೀಲ್ ಹರ್ಷ ವ್ಯಕ್ತಪಡಿಸಿದರು.

## ಶಾಸಕ ಬಸವರಾಜ್ ಮತ್ತಿಮೂಡ. ಅವರ ಪುತ್ರ ಸೇರಿ ನಾಲ್ವರ ವಿರುದ್ಧ ಪ್ರಕರಣ

ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ಮತ್ತು ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಕಲಬುರಗಿ ಗ್ರಾಮೀಣ ಕ್ಷೇತ್ರದ ಬಿಜೆಪಿ ಶಾಸಕರ ಪುತ್ರ ಸೇರಿದಂತೆ ನಾಲ್ವರು ಪ್ರಮುಖರ ವಿರುದ್ಧ ಪ್ರಕರಣ ದಾಖಲಾಗಿದ್ದು, ನ್ಯಾಯಾಲಯವು ವಿಚಾರಣೆಯನ್ನು ಜುಲೈ 2ಕ್ಕೆ ನಿಗದಿಪಡಿಸಿದೆ.**

ಕಲಬುರಗಿ ತಾಲೂಕಿನ ಅವರಾದ (ಬಿ) ಹೋಬಳಿಯ ಕೆರೂರ ಗ್ರಾಮದ ಸರ್ವೆ ನಂ. 55ರಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಖನಿಜಗಳನ್ನು ಅಕ್ರಮವಾಗಿ ಗಣಿಗಾರಿಕೆ ಮಾಡಿರುವ ಕುರಿತು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದಾರೆ.



ನ್ಯಾಯಾಲಯದ ದಾಖಲೆಗಳ ಪ್ರಕಾರ (ಪಿಸಿಆರ್ ಸಂಖ್ಯೆ: 250/2025), ಈ ಪ್ರತಿವಾದಿಗಳನ್ನಾಗಿ

ಕೆಳಗಿನವರನ್ನು ಹೆಸರಿಸಲಾಗಿದೆ: ಆಕಾಶ್ ಬಸವರಾಜ ಮತ್ತಿಮೂಡು: (ಕಲಬುರಗಿ ಗ್ರಾಮೀಣ ಕ್ಷೇತ್ರದ ಶಾಸಕರ ಪುತ್ರ), ಅತೀಕ್ ಪಾಶಾ ಜುನೈದಿ, ಸಿದ್ದಲಿಂಗ ಜಯರಾಮ್ ಕಾನೂನು ಉಲ್ಲಂಘನೆ ಮತ್ತು ಆರೋಪ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕರ ಕಚೇರಿಯ ಭೂ ವಿಜ್ಞಾನಿಗಳು ಈ ದೂರನ್ನು ದಾಖಲಿಸಿದ್ದಾರೆ. ಆರೋಪಿಗಳ ವಿರುದ್ಧ ಈ ಕೆಳಗಿನ ಕಾಯ್ದೆಗಳ ಅಡಿಯಲ್ಲಿ ಕ್ರಮ ಜರುಗಿಸಲಾಗಿದೆ ಒಒಖಆ ಕಾಯ್ದೆ: ಸೆಕ್ಷನ್ 4(1), 4(1ಎ) ಮತ್ತು 21 (ಅಕ್ರಮ ಗಣಿಗಾರಿಕೆ ಮತ್ತು ಖನಿಜಗಳ ಸಾಗಾಣಿಕೆ ನಿಯಂತ್ರಣ ).

ಕರ್ನಾಟಕ ಸಣ್ಣ ಖನಿಜ ರಿಯಾಯಿತಿ ನಿಯಮಗಳು, 1994: ನಿಯಮ 3, 42, 43 ಮತ್ತು 44ರ ಉಲ್ಲಂಘನೆ. ಪರವಾನಗಿ ಇಲ್ಲದೆ ಅಕ್ರಮವಾಗಿ ಗಣಿಗಾ-ರಿಕೆ ಚಟುವಟಿಕೆ ನಡೆಸಿ ಸರ್ಕಾರಕ್ಕೆ ನಷ್ಟ ಉಂಟುಮಾಡಿರುವ ಗಂಭೀರ ಆರೋಪ ಇವರ ಮೇಲಿದೆ. ವಿಚಾರಣೆ ಜುಲೈ 2ಕ್ಕೆ ಪ್ರಸ್ತುತ ಪ್ರಕರಣವು 'ಸಮನ್ಸ್' ಹಂತದಲ್ಲಿದ್ದು, ಪ್ರತಿವಾದಿಗಳಿಗೆ ನೋಟಿಸ್ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ. ಮಾರ್ಚ್ 15, 2025 ರಂದು ನೋಂದಣಿಯಾಗಿದ್ದ ಈ ಪ್ರಕರಣದ ಮುಂದಿನ ವಿಚಾರಣೆಯು ಜುಲೈ 2, 2026 ರಂದು ಕಲಬುರಗಿಯ 5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನಡೆಯಲಿದೆ. ಸರ್ಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜ-ಕರು (ಂಕಕ) ವಾದ ಮಂಡಿಸುತ್ತಿದ್ದಾರೆ. ಶಾಸಕರ ಪುತ್ರನೇ ಈ ಪ್ರಕರಣದಲ್ಲಿ ಆರೋಪಿಯಾಗಿರುವುದು ಜಿಲ್ಲೆಯ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ

# ಮಧುಮೇಹ ತಡೆಗೆ ಆರೋಗ್ಯಕರ ಜೀವನಶೈಲಿ ಅಗತ್ಯ: ಡಾ. ಅರವಿಂದ್

## ಸನ್ ರೈಸ್ ಕಾಲೇಜಿನ ಶನಿವಾರದ ಉಪನ್ಯಾಸದಲ್ಲಿ ಮಧುಮೇಹದ ಕುರಿತು ಮಾಹಿತಿ ನೀಡಿದ ಡಾ.ಅರವಿಂದ್ ಗರಪತಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರು ವತಿಯಿಂದ ಪ್ರತೀ ಶನಿವಾರದಂತೆ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿ-ತ್ತು.ದಿನಾಂಕ 9 ಮೇ ಶನಿವಾರದಂದು ಸಿಂಧನೂ-ರಿನ ಶ್ರೀ ಆರೋಗ್ಯ ಆಸ್ಪತ್ರೆಯ ಖ್ಯಾತ ವೈದ್ಯರಾದ ಡಾ. ಅರವಿಂದ್ ಗರಪತಿ (MBBS, MD, General Medicine, Diabetol-ogist) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ "ಮಧುಮೇಹ" ವಿಷಯದ ಕುರಿತು ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಿದರು.**

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಡಾ. ಅರವಿಂದ್ ಗರಪತಿ ಅವರು ಇಂದಿನ ಜೀವನ ಶೈಲಿ, ಆಹಾರ ಪದ್ಧತಿ ಮತ್ತು ದೈಹಿಕ ಚಟುವಟಿಕೆಗಳ ಕೊರತೆಯಿಂದ ಮಧುಮೇಹ ರೋಗವು ವೇಗವಾಗಿ ಹೆಚ್ಚುತ್ತಿದೆ ಎಂದು ತಿಳಿಸಿದರು.ಮಧುಮೇಹವು ಒಂದು ನಿಶ್ಯಬ್ದ



ಕಾಯಿಲೆಯಾಗಿದ್ದು, ಸರಿಯಾದ ಸಮಯದಲ್ಲಿ ಪತ್ತೆ ಮಾಡಿ ನಿಯಂತ್ರಣದಲ್ಲಿ ಇಡದಿದ್ದರೆ ಹೃದಯ, ಕಿಡ್ನಿ, ಕಣ್ಣು ಸೇರಿದಂತೆ ದೇಹದ ಅನೇಕ ಅಂಗಾಂಗಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಹೇಳಿದರು.

ನಿಯಮಿತ ವ್ಯಾಯಾಮ, ಸಮತೋಲನ ಆಹಾರ, ಸಮಯಕ್ಕೆ ಸರಿಯಾದ ನಿದ್ರೆ ಹಾಗೂ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯುವುದರಿಂದ ಮಧುಮೇಹವನ್ನು ನಿಯಂತ್ರಣದಲ್ಲಿ ಇಡಬಹುದು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.ಅವರು ಮುಂದುವರೆದು ನರ್ಸಿಂಗ್ ವೃತ್ತಿಯ ಮಹತ್ವದ ಕುರಿತು ಮಾತನಾಡಿ, "ರೋಗಿಯ ಆರೈಕೆಯಲ್ಲಿ ವೈದ್ಯರಿಗಿಂತಲೂ ಹೆಚ್ಚು ಸಮಯವನ್ನು ನರ್ಸಿಂಗ್ ಸಿಬ್ಬಂದಿಯೇ ಕಳೆಯುತ್ತಾರೆ.ಆದ್ದರಿಂದ ನರ್ಸಿಂಗ್ ವೃತ್ತಿ ಒಂದು ಸೇವಾ ಮನೋಭಾವದ ಮಹಾನ್ ಕ್ಷೇತ್ರವಾಗಿದೆ. ಸಮಾಜದಲ್ಲಿ ಆರೋಗ್ಯ ಸೇವೆಯ ಬೆನ್ನೆಲುಬಾಗಿ ನರ್ಸಿಂಗ್ ವಿದ್ಯಾರ್ಥಿಗಳು








ಬೆಳೆಯಬೇಕು" ಎಂದು ಹೇಳಿದರು. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಜೊತೆಗೆ ಮಾನವೀಯ ಮೌಲ್ಯಗಳು, ಶಿಸ್ತು ಮತ್ತು ಸೇವಾಭಾವವನ್ನು ಅಳವಡಿಸಿಕೊಂಡರೆ ಭವಿಷ್ಯದಲ್ಲಿ ಉತ್ತಮ ಆರೋಗ್ಯ ಸೇವಕರಾಗಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು, "ಇಂತಹ ವಿಶೇಷ ಉಪನ್ಯಾಸಗಳು ವಿದ್ಯಾರ್ಥಿಗಳಲ್ಲಿ ಹೊಸ ಚಿಂತನೆ ಮತ್ತು ಆತ್ಮವಿಶ್ವಾಸವನ್ನು ಬೆಳೆಸುತ್ತವೆ. ವೈದ್ಯಕೀಯ ಕ್ಷೇತ್ರದಲ್ಲಿ ನಿತ್ಯ ಹೊಸ ಮಾಹಿತಿಗಳನ್ನು ತಿಳಿದುಕೊಳ್ಳುವುದು ಅತ್ಯಂತ ಮುಖ್ಯ. ಡಾ. ಅರವಿಂದ್ ಗರಪತಿ ಅವರ ಉಪನ್ಯಾಸವು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ" ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಗು-ರಿಯನ್ನು ಸ್ಪಷ್ಟವಾಗಿ ಹೊಂದಿಕೊಂಡು ಶ್ರಮಿಸಿದರೆ ಆರೋಗ್ಯ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಬಹುದು ಎಂದು ಪ್ರೇರಣಾದಾಯಕ ಮಾತುಗಳನ್ನು ಹೇಳಿದರು.ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ, ಕಾರ್ಯದರ್ಶಿಯಾದ ಇರ್ಷಾದ್ ಕೆ, ವಿವಿಧ ವಿಭಾಗಗಳ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ಮುಖ್ಯ ಅತಿಥಿಗಳಿಗೆ ಕೃತಜ್ಞತೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಎಲ್ಲಾ ವಿಭಾಗಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನೇಮಕಾತಿ ಪ್ರಕಟಣೆ

BEML ನೇಮಕಾತಿ 2026–18 ಮ್ಯಾನೇಜರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 8, 2026 BEML ನೇಮಕಾತಿ 2026: 18 ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಮೇ 2026 ರ BEML ಅಧಿಕೃತ ಅಧಿಸೂಚನೆಯ ಮೂಲಕ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಮೈಸೂರು, ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಮೇ 14, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 29–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 14–ಮೇ–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 14–05–2026 ಅಧಿಕೃತ ವೆಬ್‌ಸೈಟ್: bemlindia.in

## ಸಕಾಲ ಸೇವೆಗಳ ಮಾಹಿತಿ ಬೆರಳ ತುದಿಯಲ್ಲಿರುವಂತೆ ನೋಡಿಕೊಳ್ಳಬೇಕು :ಕೃಷ್ಣ ಬೈರೇಗೌಡ ಸೂಚನೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸಕಾಲ ಗ್ಯಾರಂಟಿ ಸೇವೆಯನ್ನು ನಿಗದಿತ ಸಮಯದಲ್ಲಿ ಸಾರ್ವಜನಿಕರಿಗೆ ನೀಡಬೇಕಾದರೆ ಸಕಾಲಕ್ಕೆ ಸಂಬಂಧಿಸಿದ ಎಲ್ಲ ಇಲಾಖೆಯ ಸೇವೆಯ ಡೇಟಾ ಬೆರಳ ತುದಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು. ವಿಕಾಸಸೌಧದಲ್ಲಿ ಸಕಾಲ ಸೇವೆಗಳ ಅಡಿಯಲ್ಲಿ ನೀಡುತ್ತಿರುವ ಕೃಷಿ, ಸಾರಿಗೆ, ಶಿಕ್ಷಣ ಹಾಗೂ ಆದಾಯ ತೆರಿಗೆ ಇಲಾಖೆಗಳ ಇ–ಆಡಳಿತಕ್ಕೆ ಮತ್ತಷ್ಟು ವೇಗ ತುಂಬಿ ಲಂಚ ಮುಕ್ತಗೊಳಿಸುವ ಸಂಬಧ ಅವರು ಅಧಿಕಾರಿಗಳ ಜೊತೆ ಸಭೆ ನಡೆಸಿ ಮಾತನಾಡಿದರು.**



ಕಳೆದ ಎರಡೂವರೆ ವರ್ಷದಿಂದ ರಾಜ್ಯದಲ್ಲಿ ನಿರಂತರವಾಗಿ ಸಕಾಲ ಕುಟುಂಬ ಡೇಟಾಬೇಸ್ ಅಪ್‌ಡೇಟ್ ಮಾಡಲಾಗುತ್ತಿದೆ. ಅಲ್ಲದೆ ಕೆಲವು ಸೇವೆಗಳನ್ನು ಆಟೋಮೇಷನ್ ಮಾಡಬೇಕು. ಆಟೋಮೇಷನ್ ಮಾಡಿದರೆ ಮಾತ್ರ ಸರ್ಕಾರದ ಸೇವೆಗಳು ಜನರಿಗೆ ಶೀಘ್ರ ತಲುಪಿ ಲಂಚದ ಪಿಡುಗು ನಿವಾರಣೆಯಾಗುತ್ತದೆ. ಅಲ್ಲದೆ ಜನರಿಗೆ ಶೋಷಣೆಯಿಂದ ಮುಕ್ತಿ ಸಿಗಲಿದೆ ಎಂದರು. ಸಕಾಲದಲ್ಲಿ ಹತ್ತಾರು ಇಲಾಖೆಗಳಿದ್ದು ಹಲವು ಸೇವೆಗಳನ್ನು ಹೊರಗುತ್ತಿಗೆಗೆ ನೀಡಲಾಗಿದೆ. ಹೊರಗುತ್ತಿಗೆ ನೌಕರರ ಸಂಬಳವನ್ನು ಕುಟುಂಬ ಆ?ಯಪ್ ಮೂಲಕ ನೀಡುವಂತಾಗಬೇಕು. ವೃತ್ತಿ ತೆರಿಗೆ ಸಹ ಕುಟುಂಬಕ್ಕೆ ಏಕೀಕೃತ ಆಗಬೇಕು. ವೃತ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕ ಸಂಗ್ರಹಿಸುತ್ತಿರುವುದರಿಂದ ಅದನ್ನು ಏಕೀಕರಣ ಮಾಡುವುದು ಕಷ್ಟವಲ್ಲ. ಅಧಿಕಾರಿಗಳು ಪ್ರಯತ್ನಪಡಬೇಕು ಅಷ್ಟೇ ಎಂದರು. ಸರಕು ಸೇವಾ ತೆರಿಗೆ (ಜಿಎಸ್‌ಟಿ) ಯನ್ನು ಕೂಡ ಏಕೀಕೃತ ಮಾಡಬೇಕು. ವಾಹನ ಚಾಲನಾ ಪರವಾನಗಿಗೆ ಆಧಾರ್ ಕಡ್ಡಾಯವಾಗಿರಬೇಕು. ಆದರೆ ವಾಹನ ನೋಂದಣಿಗೆ ಆಧಾರ್ ಇ ಕೆವೈಸಿ ಯನ್ನು ಏಕೆ ಕಡ್ಡಾಯ ಮಾಡಬಾರದು ಎಂದು ಅವರು ಅಧಿಕಾರಿಗಳನ್ನು ಪ್ರಶ್ನಿಸಿದರು. ಆಸ್ತಿ ನೋಂದಣಿಯಲ್ಲಿ ಆಧಾರ್,ಪ್ಯಾನ್ ಕಾರ್ಡ್, ಪಾಸ್ಪೋರ್ಟ್ ಈ ಮೂರು ದಾಖಲೆಗಳಲ್ಲಿ ಒಂದನ್ನು ಕಡ್ಡಾಯ ಮಾಡಿದ್ದೇವೆ. ವಾಹನ ನೋಂದಣಿಯೂ ಆಸ್ತಿ ಪ್ರಕಾರವೇ ಆಗಿದ್ದು ಆಧಾರ್ ಇ ಕೆವೈಸಿ ಕಡ್ಡಾಯ ಮಾಡುವುದು ಸೂಕ್ತ ಎಂದು ಅವರು ಹೇಳಿದರು.

# ಸರಕಾರಿ ಪಿಯು ಕಾಲೇಜು ಮಂಜೂರಾತಿ ಬಳಗಾನೂರಿನ ಭವಿಷ್ಯಕ್ಕೆ ಮರುಜನ್ಮ ಸಾಹಿತಿ ಸುರೇಶ ಬಳಗಾನೂರು ಅಭಿಮತ

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಬಳಗಾನೂರು ಪಟ್ಟಣ–ಕ್ಕೆ ಸರಕಾರಿ ಪದವಿಪೂರ್ವ ಕಾಲೇಜು ಮಂಜೂರಾಗಿರುವುದು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಬೆಳಕನ್ನು ಹರಡಿದಂತಾಗಿದೆ ಎಂದು ಸಾಹಿತಿ ಸುರೇಶ ಬಳಗಾನೂರು ಅಭಿಪ್ರಾಯಪಟ್ಟಿದ್ದಾರೆ. ಹನ್ನೊಂದನೇ ಶತಮಾನದಲ್ಲೇ ವಿದ್ಯಾಕೇಂದ್ರವಾಗಿ ಹೆಸರು ಪಡೆದಿದ್ದ ಬಳಗಾನೂರಿಗೆ ಇಷ್ಟೊಂದು ವರ್ಷಗಳಾದರೂ ಸರಕಾರಿ ಪಿ.ಯು ಕಾಲೇಜು ಇಲ್ಲದಿರುವುದು ಶುಭ್ರ ಬಿಳಿ ಅಂಗಿಯ ಮೇಲಿನ ಕಪ್ಪು ಚುಕ್ಕೆಯಂತೆ ಎದ್ದು ಕಾಣಿಸುತ್ತಿತ್ತು.**

ಇದೀಗ ಕಾಲೇಜು ಮಂಜೂರಾಗಿರುವುದರಿಂದ ಆ ಕೊರತೆ ನೀಗಿದ್ದು, ಪಟ್ಟಣದ ಶಿಕ್ಷಣ ಕ್ಷೇತ್ರಕ್ಕೆ ಹೊಸ ಹೊಳಪು ಬಂದಿದೆ ಎಂದು ಅವರು ತಿಳಿಸಿದ್ದಾರೆ.ಬಳಗಾನೂರು ನವನಿರ್ಮಾಣ ವೇದಿಕೆಯ ಪದಾಧಿಕಾರಿಗಳು, ವಿವಿಧ ಪ್ರಗತಿಪರ,




ರೈತಪರ, ದಲಿತಪರ, ಕನ್ನಡಪರ, ವಿದ್ಯಾರ್ಥಿಪರ ಹಾಗೂ ಮಹಿಳಾಪರ ಸಂಘಟನೆಗಳು ಮುಖಂಡರುಗಳು ಪಕ್ಷಭೇದ ಮರೆತು ನಡೆಸಿದ ಹೋರಾಟ, ಪ್ರತಿಭಟನೆಗಳು ಹಾಗೂ ಮಸ್ಕಿ ಶಾಸಕ ಬಸನಗೌಡ ತುರುವಿಹಾಳ ಅವರ ಸಹಕಾರದಿಂದ ಈ ಕನಸು ನನಸಾಗಿದೆ ಎಂದು ಅವರು ಹೇಳಿದ್ದಾರೆ. ಇದೇ ವೇಳೆ ಪಟ್ಟಣದ ಶಿಕ್ಷಣ ಪ್ರೇಮಿಗಳು, ಪಾಲಕರು ಮತ್ತು ವಿದ್ಯಾರ್ಥಿಗಳ ಪ್ರಾಮಾಣಿಕ ಪ್ರಯತ್ನವೂ ಕಾಲೇಜು ಮಂಜೂರಿಗೆ ಪ್ರಮುಖ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.



ಹೋರಾಟ ಮಾಡಿ ಕಾಲೇಜು ತರುವುದು ಒಂದು ಹಂತವಾದರೆ, ಅದನ್ನು ತಲೆತಲಾಂತರಗಳವರೆಗೆ ಉಳಿಸಿ ಬೆಳೆಸುವುದು ಮತ್ತೊಂದು ದೊಡ್ಡ ಜವಾಬ್ದಾರಿ ಎಂದು ಅವರು ಹೇಳಿದ್ದಾರೆ. ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರ ಹೊಕ್ರಾಣಿ ಇಲಾಖಾ ನಿಯಮಾನುಸಾರ ಕಾರ್ಯಪ್ರವೃತ್ತರಾಗಿ 0333 ಆರ್.ಆರ್. ನಂಬರ್ ಮಂಜೂರು ಮಾಡಿಸಿದ್ದು, ಶಂಕರಲಿಂಗ ಆನೆಗುಂದಿ ಅವರನ್ನು ಪ್ರಭಾರಿ ಪ್ರಾಚಾರ್ಯರಾಗಿ ನೇಮಕ ಮಾಡಲಾಗಿದೆ. ಇದೀಗ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆದು ಕಾಲೇಜಿನ ಅಭಿವೃದ್ಧಿಗೆ ಕೈಜೋಡಿಸಬೇಕಿದೆ ಎಂದು ಕರೆ ನೀಡಿದ್ದಾರೆ.ಪ್ರಸ್ತುತ ಕಾಲೇಜಿನಲ್ಲಿ ಕಂಪ್ಯೂಟರ್ ಕಾಮರ್ಸ್ ವಿಭಾಗಕ್ಕೆ ಮಾತ್ರ ಅನುಮೋದನೆ ದೊರೆತಿದ್ದು, ಮುಂದಿನ ವರ್ಷ ಕಲಾ ವಿಭಾಗವೂ ಆರಂಭವಾಗುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ. ಈ ಕಾಲೇಜಿನಿಂದ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು, ವಿಶೇಷವಾಗಿ ಬಾಲಕಿಯ–ರಿಗೆ ಉನ್ನತ ಶಿಕ್ಷಣದ ಹೊಸ ಆಶಾಕಿರಣ ಮೂಡಿದೆ. ಸಣ್ಣಪುಟ್ಟ ಕಾರಣಗಳಿಂದ ಕಾಲೇಜಿನ ಅಸ್ತಿತ್ವಕ್ಕೆ ಧಕ್ಕೆ ತಂದು ಮಕ್ಕಳ ಭವಿಷ್ಯವನ್ನು ಕತ್ತಲೆಗೆ ತಳ್ಳಬಾರದು ಎಂದು ಸಾಹಿತಿ ಸುರೇಶ ಬಳಗಾನೂರು ಮನವಿ ಮಾಡಿದ್ದಾರೆ.

# ಮೇ 17ರಂದು ವಾಲ್ಮೀಕಿ ಜಾಗೃತಿ ಸಮಾವೇಶ ಹಾಗೂ ಸನ್ಮಾನ ಕಾರ್ಯಕ್ರಮ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಜಿ ತಾಲೂಕು ಪಂಚಾಯತ್ ಸದಸ್ಯರಾದ ಗೋವಿಂದರಾಜ ತಿಮ್ಮಾಪುರು ಅವರು ಮಾತನಾಡಿ, ಸಿರವಾರ ತಾಲೂಕು ವಾಲ್ಮೀಕಿ ನಾಯಕರ ಒಕ್ಕೂಟದ ವತಿಯಿಂದ ಜಿಲ್ಲಾ ಮಟ್ಟದ ವಾಲ್ಮೀಕಿ ಜಾಗೃತಿ ಸಮಾವೇಶ ಹಾಗೂ ಸಮಾಜದ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಮೇ 17ರಂದು ಸಿರವಾರ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.**

ಈ ಸಂದರ್ಭದಲ್ಲಿ ರಂಗನಾಥ ಮುರಾಳ ಮಾತನಾಡಿ, ಕಾರ್ಯಕ್ರಮವು ಮೇ 17ರಂದು ಬೆಳಿಗ್ಗೆ 10 ಗಂಟೆಗೆ ಆರಂಭವಾಗಲಿದ್ದು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಗುವುದು ಎಂದು ಹೇಳಿದರು. ಚನ್ನಬಸವ ನಾಯಕ ಮ್ಯಾಕಲ್ ದೊಡ್ಡಿ ಮಾತನಾಡಿ, ಸಮಾಜದ ಎಲ್ಲಾ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಪ್ರಸನ್ನಾನಂದ ಸ್ವಾಮೀಜಿ, ವರದಾನೇಶ್ವರ ಸ್ವಾಮೀಜಿ, ಸತೀಶ್ ಜಾರಕಿಹೊಳಿ, ಬಿ. ಶ್ರೀರಾಮುಲು, ಜಿ. ಕುಮಾರ್ ನಾಯಕ, ಹಂಪಯ್ಯ ಸಾಹುಕಾರ ಸೇರಿದಂತೆ ಸಮಾಜದ ಹಲವಾರು ಗಣ್ಯರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು ಹಾಗೂ ಮುಖಂಡರು ಭಾಗವಹಿಸಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಶಿವಪ್ಪ ನಾಯಕ ಕಕ್ಕಲದೊಡ್ಡಿ, ಚನ್ನಬಸವ ನಾಯಕ ಮ್ಯಾಕಲ್ ದೊಡ್ಡಿ, ಶ್ರೀಧರ್ ಪಾಟೀಲ್, ರಂಗನಾಥ ಮುರಾಳ, ಶಿವರಾಜ ನಾಯಕ ಕಾವಲಿ, ಮೌನೇಶ ನಾಯಕ ಬೆಂಗಂಡಿ, ಬಿಮ್ಮಣ್ಣ ನಾಯಕ ಮುರಾಳ, ಶ್ರೀಮಂತ ಬಿ.ಆರ್., ಗುಂಡಪ್ಪ ನಾಯಕ ಕಾವಲಿ, ತಿಮ್ಮಣ್ಣ ಮುರಾಳ ಸೇರಿದಂತೆ ಸಮಾಜದ ಅನೇಕ ಮುಖಂಡರು ಉಪಸ್ಥಿತರಿದ್ದರು.

# ರಾಷ್ಟ್ರಧ್ವಜಕ್ಕೆ ಅವಮಾನಿಸಿದ ನೀರಲಕೆರೆ ಗ್ರಾ.ಪಂ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿರುವ ತಾಲ್ಲೂಕಿನ ನೀರಲಕೆರೆ ಗ್ರಾಮ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಕ್ರಮ ಹಾಗೂ ಅಮಾನತ್ ಮಾಡುವಂತೆ ಒತ್ತಾಯಿಸಿ ತಾಲೂಕು ಪಂಚಾಯತ ಕಾರ್ಯಾನಿರ್ವಾಹಕ ಅಧಿಕಾರಿ ಉಮೇಶ ಅವ–ರಿಗೆ ಕರ್ನಾಟಕ ಜನ ಜಾಗೃತಿ ವೇದಿಕೆ ತಾಲೂಕು ಅದ್ಯಕ್ಷ ಕಿರಣ ಕುಮಾರ ಮನವಿ ಪತ್ರ ಸಲ್ಲಿಸಿದರು.**

ರಾಷ್ಟ್ರಧ್ವಜವನ್ನು ಗೌರವಯುತ ವಾಗಿ ಇರಿಸಬೇಕಾದ ಅಧಿಕಾರಿಗಳು, ಪಂಚಾಯಿತಿಯ ಹಳೆಯ ಬೀರುಗಳಲ್ಲಿ ಧೂಳು ಹಿಡಿದ ಫೈಲ್‌ಗಳು, ಹರಿದ ಶಾಲುಗಳು ಹಾಗೂ ಕಸದ ನಡುವೆ ಸುಮಾರು 8 ಧ್ವಜಗಳನ್ನು ಸೇರಿಸಿರುವದು ಕಂಡುಬಂದಿದ್ದು.ಅಷ್ಟೇ ಅಲ್ಲದೆ, ಪ್ರತಿದಿನ ಹಾ–ರಿಸುವ ಧ್ವಜವನ್ನು ಸಂಜೆ ಇಳಿಸಿದ ನಂತರ



ಪವಿತ್ರವಾಗಿ ಇಡುವ ಬದಲು, ಸಾರ್ವಜನಿಕರು ಬಳಸುವ ಟೇಬಲ್‌ನ ಕಬರ್ಡ್‌ನಲ್ಲಿ ಬೇಕಾಬಿಟ್ಟಿ ಇರಿಸಲಾಗುತ್ತಿದೆ, ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ ಕಾಯ್ದೆ 1971ರ ಅಡಿಯಲ್ಲಿ ಇದು ಶಿಕ್ಷಾರ್ಹ ಅಪರಾಧ ವಾಗಿದ್ದು, ಅಧಿಕಾರಿಗಳ ಮೇಲೆ ತಕ್ಷಣವೇ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು.

ಪಂಚಾಯಿತಿ ಅಭಿವೃದ್ಧಿ ಅಧಿಕಾ–ರಿಗಳು ಮತ್ತು ಕಾರ್ಯದರ್ಶಿಗಳು ಕಚೇರಿಗೆ ಸರಿಯಾಗಿ ಹಾಜರಾಗದೆ ಇರುವುದ ರಿಂದ ಇಂತಹ ಘಟನೆಗಳು ನಡೆಯುತ್ತಿವೆ. ಇವರನ್ನು ಕೂಡಲೇ ಅಮಾನತು ಗೊಳಿಸಬೇಕು ಎಂದು ಒತ್ತಾಯಿಸಿದರು. ಒಂದು ವೇಳೆ ನಮ್ಮ ಮನವಿಗೆ ಸ್ಪಂಧಿಸದಿದಲ್ಲಿ ಗ್ರಾಮಸ್ಥರು ಹಾಗೂ ಸಮಿತಿಯ ವತಿಯಿಂದ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವು ದೆಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಪ್ರದೀಪ್ ಮುತ್ತು ಚಿಕ್ಕ ಹೆಸರೂರು, ಹುಲುಗಪ್ಪ ಕೆಸರಟ್ಟಿ, ಚಿನ್ನಪ್ಪ ರಾರಾವಿ ಮುದಗಲ್, ನಗರ ಘಟಕದ ಅಧ್ಯಕ್ಷ ಮೌನೇಶ್, ಅಮರೇಶ್, ಪ್ರವೀಣ್, ರಾಜು ಹಾಗೂ ಇತರರು ಉಪಸ್ಥಿತರಿದ್ದರು.

# IFS ಫಲಿತಾಂಶ ಪ್ರಕಟ: ರೈತನ ಮಗ ದೇಶಕ್ಕೆ ಫಸ್ಟ್ ರ‍್ಯಾಂಕ್

ನೈಜ್ಯ ದೆಸೆ ನ್ಯೂಸ್

**ಅಥಣಿ: ಕೇಂದ್ರ ಲೋಕಸೇವಾ ಆಯೋಗವು ಭಾರತೀಯ ಅರಣ್ಯ ಸೇವೆ (ಇಂಡಿಂ–ಯನ್ ಫಾರೆಸ್ಟ್ ಸರ್ವೀಸ್) ಪರೀಕ್ಷೆಯ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದ್ದು, ಕನ್ನಡಿಗನಿಗೆ ಪ್ರಥಮ ರ?ಯಾಂಕ್ ಲಭಿಸಿದೆ.**

ಅಥಣಿ ತಾಲೂಕಿನ ಸವದಿ ಗ್ರಾಮದ ಬಸವರಾಜ್ ದರೇಪ್ಪ ಕೆಂಪವಾಡ ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ರ?ಯಾಂಕ್ ಗಳಿಸುವ ಮೂಲಕ ದೇಶದ ಗಮನ



ಸೆಳೆದಿದ್ದಾರೆ. ಸಾಮಾನ್ಯ ರೈತನ ಮಗನ ಅದ್ವಿತೀಯ ಸಾಧನೆಗೆ ಅಭಿನಂದನೆಗಳ ಮಹಾಪೂರ ಹರಿದುಬರುತ್ತಿದೆ. ಸತತ ಪರಿಶ್ರಮದಿಂದ ಬಸವರಾಜ್ ಅವರು ಕೇವಲ ತಮ್ಮ ಎರಡನೇ ಪ್ರಯತ್ನದಲ್ಲಿಯೇ ಟಾಪರ್ ಆಗಿದ್ದಾರೆ. ಇವರ ಅಪ್ರತಿಮ ಸಾಧನೆಯಿಂದ ಕುಟುಂಬಸ್ಥರಲ್ಲಿ ಹಾಗೂ ಸವದಿ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ಸಾಮಾನ್ಯ ರೈತನ ಪುತ್ರನಾಗಿರುವ ಬಸವರಾಜ್ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರು ಸವದಿ ಗ್ರಾಮದಲ್ಲೇ ಪೂರೈಸಿದ್ದರು. ಬಳಿಕ ಅಥಣಿ ಪಟ್ಟಣದಲ್ಲಿ ಮುಂದಿನ ವಿದ್ಯಾಭ್ಯಾಸ ಮುಗಿಸಿ ನಂತರ ಶಿರಸಿಯ ಕಾಲೇಜಿನಲ್ಲಿ ಪದವಿ ವ್ಯಾಸಂಗ ಪಡೆದರು. ಪದವಿ ನಂತರ ಬೆಂಗಳೂರಿನಲ್ಲಿ ಯುಪಿ–ಎಸ್?ಸಿ ಪರೀಕ್ಷೆಗಾಗಿ ಕಠಿಣ ಸಿದ್ಧತೆ ನಡೆಸಿದ್ದರು.

ಈ ಸಾಧನೆಯ ಕುರಿತು ಮಾತನಾಡಿದ ಬಸವರಾಜ್ ಕೆಂಪವಾಡ, ನನ್ನ ಸತತ ಪ್ರಯತ್ನದ ಫಲವಾಗಿ ಈ ಸಾಧನೆ ಮಾಡಲು ಸಾಧ್ಯವಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಕಲಿತ ನಾನು, ಓರ್ವ ರೈತನ ಮಗನಾಗಿ ಈ ಹಂತಕ್ಕೆ ತಲುಪಿದ್ದು ನನಗೆ ಅತೀವ ಹೆಮ್ಮೆ ತಂದಿದೆ ಎಂದು ತಿಳಿಸಿದ್ದಾರೆ.

# ಡಿಎಂಕೆ ಎಐಎಡಿಎಂಕೆ ಮೈತ್ರಿ ಊಹಾಪೋಹ :ಹೆಚ್‌ಡಿಕೆ

ನೈಜ್ಯ ದೆಸೆ ನ್ಯೂಸ್

**ಹಾಸನ: ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳು ಸೇರಿ ಸರ್ಕಾರ ರಚನೆ ಮಾಡಲಿವೆ ಎಂಬ ಸುದ್ದಿಗಳು ಕೇವಲ ಊಹಾಪೋಹಗಳಾಗಿದ್ದು, ನನ್ನ ರಾಜಕೀಯ ಅನುಭವದಲ್ಲಿ ಅಂಥ ಸಾಧ್ಯತೆ ಕಾಣುವುದಿಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.**

ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆಯ ಶ್ರೀ ರಂಗನಾಥಸ್ವಾಮಿ ಬೆಟ್ಟದ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನ ರಾಜ್ಯಪಾಲರು ಕಾನೂನು ತಜ್ಞರ ಸಲಹೆ ಪಡೆದು ಸ್ಪಷ್ಟ ಬಹುಮತದ ಸಂಖ್ಯೆಯನ್ನು ಪರಿಗಣಿಸಲಿದ್ದಾರೆ ಎಂದಿದ್ದಾರೆ. ಟಿವಿಕೆ ಪಕ್ಷಕ್ಕೆ ಕಾಂಗ್ರೆಸ್ ಬೆಂಬಲ ನೀಡುತ್ತಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್



ಪಕ್ಷದ ನಡೆ ಕುರಿತು ಟೀಕೆ ಮಾಡುವ ಅಗತ್ಯವಿಲ್ಲ. ಯಾವ ಸಂದರ್ಭಗಳಲ್ಲಿ ಕಾಂಗ್ರೆಸ್ ಪಕ್ಷ ಸರ್ಕಾರಗಳನ್ನು ಅಸ್ಥಿರಗೊಳಿಸಿದೆ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಕೇಂದ್ರದಲ್ಲಿ ಚರಣ್‌ಸಿಂಗ್, ವಿ.ಪಿ.ಸಿಂಗ್, ಚಂದ್ರಶೇಖರ್ ಸರ್ಕಾರಗಳ ಸಂದರ್ಭದಲ್ಲಿ ನಡೆದ ಬೆಳವಣಿಗೆಗಳೇ ಸಾಕು. ದೇವೇಗೌಡರು ಪ್ರಧಾನಿಯಾಗಿದ್ದಾಗಲೂ ಯಾವ ಕಾರಣಗಳನ್ನು ನೀಡಿ ಸರ್ಕಾರ ಕೆಡವಿದರು ಎಂಬುದು ದೇಶಕ್ಕೆ ಗೊತ್ತಿದೆ ಎಂದು ಹೇಳಿದ್ದಾರೆ. ಇಪ್ಪತ್ತು ವರ್ಷಗಳ ಕಾಲ ಡಿಎಂಕೆ ಜೊತೆ ಇದ್ದವರು ಈಗ ವಿಜಯ್ ಜೊತೆ ಸೇರಿದ್ದಾರೆ.

ಅವರ ರಾಜಕೀಯ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡೇ ತೀರ್ಮಾನ ಮಾಡಿರಬಹುದು. ಅದರ ಬಗ್ಗೆ ಕಾಲವೇ ಉತ್ತರ ನೀಡಲಿದೆ ಎಂದು ತಿಳಿಸಿದ್ದಾರೆ. ತಮಿಳುನಾಡಿನ ರಾಜಕಾರಣದಲ್ಲಿ ಸಿನಿಮಾದ ಪ್ರಭಾವ ಬಹಳ ಹಿಂದಿನಿಂದಲೂ ಇದೆ. ಈಗಲೂ ಅದೇ ಪ್ರಭಾವ ಕಾಣಿಸಿದೆ. ಹೊಸ ಮುಖಕ್ಕೆ ಅಧಿಕಾರ ನೀಡಬೇಕು ಎಂಬ ಮನೋಭಾವದಿಂದ ಜನ ತೀರ್ಮಾನ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ತಮಿಳುನಾಡಿನಲ್ಲಿ ಘೋಷಿಸಲಾಗುತ್ತಿರುವ ಉಚಿತ ಗ್ಯಾರಂಟಿಗಳ ಕುರಿತು ಪ್ರಶ್ನಿಸಿದಾಗ, ಅವರ ಬಜೆಟ್ ವರ್ಷಕ್ಕೆ 3.40 ಲಕ್ಷ ಕೋಟಿ ರೂ.ಇದೆ. ಆದ–'ರೆ ಘೋಷಿಸಿರುವ ಉಚಿತ ಯೋಜನೆಗಳಿಗೆ 6ರಿಂದ 7 ಲಕ್ಷ ಕೋಟಿ ಬೇಕಾಗಬಹುದು. ಆ ಮಟ್ಟದ ಹಣವನ್ನು ಹೇಗೆ ಹೊಂದಿಸುತ್ತಾರೆ ಎಂಬುದನ್ನು ಕಾದು ನೋಡಬೇಕು. ದೇವರೇ ಕಾಪಾಡಬೇಕು ಎಂದು ತಿಳಿಸಿದ್ದಾರೆ.

ಓಟ್ ಚೋರಿ ಚರ್ಚೆಗೆ ಅರ್ಥವಿಲ್ಲ: ಶೃಂಗೇರಿ ಕ್ಷೇತ್ರ ಮರುಎಣಿಕೆ ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ. ಮಾಜಿ ಶಾಸಕ ರಾಜೇಗೌಡರು ಚುನಾವಣಾ ಆಯೋಗಕ್ಕೂ ದೂರು ನೀಡಿದ್ದಾರೆ. ಮುಂದಿನ ಬೆಳವಣಿಗೆಗಳನ್ನು ಕಾದು ನೋಡಬೇಕು. ಈಗಿನ ಪರಿಸ್ಥಿತಿಯಲ್ಲಿ ಓಟ್ ಚೋರಿ ಬಗ್ಗೆ ನಡೆಯುತ್ತಿರುವ ಚರ್ಚೆಗೆ ಯಾವುದೇ ಅಥ–'ರ್ವಿಲ್ಲ. ಆ ವಿಷಯದಲ್ಲಿ ಚರ್ಚೆ ಮಾಡುವ ನೈತಿ–ಕತೆಯೂ ಕೆಲವರಿಗೆ ಇಲ್ಲ ಎಂದು ಹೇಳಿದ್ದಾರೆ. ಯಡಿಯೂರಪ್ಪ ಕಾರ್ಯಕ್ರಮಕ್ಕೆ ಗೈರು: ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮದ ಕುರಿತ ಮಾತನಾಡಿದ ಅವರು, ಯಡಿಯೂರಪ್ಪ ಅವರ ಐವತ್ತು ವರ್ಷದ ರಾಜಕೀಯ ಸಾಧನೆ ಮತ್ತು ರಾಜ್ಯಕ್ಕೆ ನೀಡಿರುವ ಕೊಡುಗೆಯನ್ನು ಸರಿಸಿ ಬಿಜೆಪಿ ಕಾರ್ಯಕ್ರಮ ಆಯೋಜಿಸಿದೆ. ಆದರೆ, ನನಗೆ ಬೇರೆ ಕಾರ್ಯಕ್ರಮ ಇರುವುದರಿಂದ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

# ಐಟಿಐ ಟರ್ನರ್

ಐಟಿಐ ಟರ್ನರ್ (ITI Turner) ಕೋರ್ಸ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ 2 ವರ್ಷಗಳ ವೃತ್ತಿಪರ ಕೋರ್ಸ್ ಆಗಿದೆ. ಲೇತ್ ಯಂತ್ರಗಳ ಬಳಕೆ, ಲೋಹದ ಘಟಕಗಳ ತಯಾರಿಕೆ ಮತ್ತು ಸಿಎನ್‌ಸಿ (CNC) ಟರ್ನಿಂಗ್ ಬಗ್ಗೆ ಇಲ್ಲಿ ತರಬೇತಿ ನೀಡಲಾಗುತ್ತದೆ. 10ನೇ ತರಗತಿ ಉತ್ತೀರ್ಣರಾದವರು ಪ್ರವೇಶ ಪಡೆಯಬಹುದು. ITI ಟರ್ನರ್ ಕೋರ್ಸ್ ವಿವರಗಳು (ITI Turner Course Details): ಕೋರ್ಸ್ ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು).ಅರ್ಹತೆ: 10ನೇ ತರಗತಿ (ವಿಜ್ಞಾನ ಮತ್ತು ಗಣಿತದೊಂದಿಗೆ).ವಯಸ್ಸು: ಸಾಮಾನ್ಯವಾಗಿ 14 ರಿಂದ 40 ವರ್ಷಗಳು.ಪ್ರವೇಶ ಪ್ರಕ್ರಿಯೆ: ಮೆರಿಟ್ ಆಧಾರಿತ (10ನೇ ತರಗತಿ ಅಂಕಗಳು). ಕಲಿಕಾಂಶಗಳು (Course Syllabus):ಪ್ರಾಯೋಗಿಕ ಕೌಶಲ್ಯ (Practical Skill): ಲೇತ್ ಯಂತ್ರಗಳಲ್ಲಿ ವಿವಿಧ ಭಾಗಗಳನ್ನು ಟರ್ನಿಂಗ್ ಮಾಡುವುದು, ಡ್ರಿಲ್ಲಿಂಗ್, ಮಿಲ್ಲಿಂಗ್, ಮತ್ತು ಗ್ರೈಂಡಿಂಗ್.ತಾಂತ್ರಿಕ ಜ್ಞಾನ (Theoretical Knowledge): ಮೆಕ್ಯಾನಿಕಲ್ ಡ್ರಾಯಿಂಗ್, ವರ್ಕ್‌ಶಾಪ್ ಕ್ಯಾಲ್ಕುಲೇಶನ್, ಮತ್ತು ವಿಜ್ಞಾನ. ಅಓಅ ತಂತ್ರಜ್ಞಾನ: ಕಂಪ್ಯೂಟರ್ ನಿಯಂತ್ರಿತ ಯಂತ್ರಗಳ (CNC) ಮೂಲಭೂತ ತರಬೇತಿ. ಉದ್ಯೋಗ ಅವಕಾಶಗಳು (Job Opportunities):ಸರ್ಕಾರಿ ಮತ್ತು ಖಾಸಗಿ ಕೈಗಾರಿಕೆಗಳು (ITI ಇಂಪ್ಲಾಯ್ಮೆಂಟ್).ಲೇತ್ ಆಪರೇಟರ್, CNC ಆಪರೇಟರ್, ಮೆಷಿನಿಸ್ಟ್, ಟೂಲ್ ರೂಮ್ ಅಸಿಸ್ಟೆಂಟ್.ಉತ್ತಮ ಬೇಡಿಕೆ ಮತ್ತು ಸಂಬಳವಿದೆ. ಮುಖ್ಯ ಮಾಹಿತಿ:ಕೋರ್ಸ್ ಮುಗಿದ ನಂತರ, ವಿದ್ಯಾರ್ಥಿಗಳು ಆಖಇ ಕರ್ನಾಟಕ ನಿಯಮಗಳ ಪ್ರಕಾರ ನೇರವಾಗಿ ಡಿಪ್ಲೊಮಾ 2ನೇ ವರ್ಷಕ್ಕೆ (Lateral Entry) ಪ್ರವೇಶ ಪಡೆಯಬಹುದು.

## ಬಸವೇಶ್ವರ ಸಮುದಾಯ ಭವನ ಭೂಮಿ ಪೂಜೆ.

**ನೈಜ್ಯ ದೆಸೆ ನ್ಯೂಸ್**

ರಬಕವಿ ಬನಹಟ್ಟಿಯ: ಮದಲಮಟ್ಟಿ ಗ್ರಾಮದಲ್ಲಿ ಬಸವೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಭಕ್ತಿಪೂರ್ವಕ ಕಾರ್ಯಕ್ರಮ ಸಿದ್ದು ಸವದಿ ನೆರವೇರಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಗ್ರಾಮೀಣ ಭಾಗದ ಸಮುದಾಯ ಭವನಗಳ ನಿರ್ಮಾಣದಿಂದ ಸಾರ್ವಜನಿಕ ಕಾರ್ಯಕ್ರಮಗಳು, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸಮಾಜದ ಸಭೆಗಳಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ಸರ್ಕಾರದಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಗ್ರಾಮದ, ಬಾಬುಗೌಡ ಪಾಟೀಲ ಶಂಕರ ಮಲ್ಲನವರ ಬಸು ಮಲ್ಲನವರ ದಯಾನಂದ ಮಗದುಮ ಸಂಗಮೇಶಗೌಡ ಪಾಟೀಲ ಮತ್ತು ಬಸವೇಶ್ವರ ಭಕ್ತರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದರು.

**ನೈಜ್ಯ ದೆಸೆ**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**




# ಕಲ್ಬುರ್ಗಿ ವಿವಿಯಲ್ಲಿ 281 ಹೊರಗುತ್ತಿಗೆ ಕಾರ್ಮಿಕರ ನೌಕರರು ವಜಾ! ಕ್ರೂರ ದಾಳಿ ಕಾನೂನು ಉಲ್ಲಂಘನೆ.!

**ನೈಜ್ಯ ದೆಸೆ ನ್ಯೂಸ್**

**ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ ಹಲವು ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದ 281 ಹೊರಗುತ್ತಿಗೆ ನೌಕರರನ್ನು ಏಕಾಏಕಿ ಕೆಲಸದಿಂದ ವಜಾಗೊಳಿಸಿರುವುದು ಕೇವಲ ಆಡಳಿತಾತ್ಮಕ ಕ್ರಮವಲ್ಲ, ಇದು ಕಾರ್ಮಿಕ ವರ್ಗದ ಬದುಕಿನ ಮೇಲಿನ ಕ್ರೂರ ದಾಳಿ ಮತ್ತು ಕಾರ್ಮಿಕ ಕಾನೂನುಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಂಾ ರಾಜ್ಯಾಧ್ಯಕ್ಷರಾದ ಎಂ.ಡಿ.ಅಮೀರ್ ಅಲಿ ಹೇಳಿದರು.**

ಸಾವಿರಾರು ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾಲಯದ ದೈನಂದಿನ ಕಾರ್ಯಾಚರಣೆ ಕಾರ್ಮಿಕರ ಶ್ರಮದ ಮೇಲೆ ನಿಂತಿದ್ದರೂ ಸಹ ಅದೇ ಕಾರ್ಮಿಕರನ್ನು ಕೆಲಸದಿಂದ ಮೇ 1 ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ದಿನವೇ ಕಾರ್ಮಿಕರನ್ನು ಬೀದಿಗೆ ತಳ್ಳಿರುವುದು ಅಮಾನವೀಯ ಮತ್ತು ಸಂವಿಧಾನ ವಿರೋಧಿ ಕ್ರಮವಾಗಿದೆ. ಭಾರತ ಸಂವಿಧಾನದ ಆರ್ಟಿಕಲ್ 14 (ಸಮಾನತೆ ಹಕ್ಕು), ಆರ್ಟಿಕಲ್ 21 (ಬದುಕುವ ಹಕ್ಕು), ಹಾಗೂ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲ್ಸಿ ಅಡಿಯಲ್ಲಿ ಕಾರ್ಮಿಕರಿಗೆ ಗೌರವಯುತ ಜೀವನ ಮತ್ತುಉದ್ಯೋಗ ಭದ್ರತೆ ಒದಗಿಸುವ ಜವಾಬ್ದಾರಿ ಸರ್ಕಾರಕ್ಕಿದೆ.

ಆದರೆ ಕಲಬುರ್ಗಿ ವಿಶ್ವವಿದ್ಯಾಲಯ ಆಡಳಿತ ಕಾರ್ಮಿಕರನ್ನು ಯಂತ್ರಗಳಂತೆ ಬಳಸಿಕೊಂಡು ಈಗ ನಿರ್ದಯವಾಗಿ ಹೊರಹಾಕಿದೆ.



ಹಲವಾರು ವರ್ಷಗಳಿಂದ ನಿರಂತರ ಸೇವೆ ಸಲ್ಲಿಸುತ್ತಿದ್ದ ಕಾರ್ಮಿಕರನ್ನು ಯಾವುದೇ ನ್ಯಾಯಸಮ್ಮತ ವಿಚಾರಣೆ ಇಲ್ಲದೆ, ಪೂರ್ವ ಸೂಚನೆ ಇಲ್ಲದೆ, ಪರ್ಯಾಯ ವ್ಯವಸ್ಥೆ ಇಲ್ಲದೆ ವಜಾಗೊಳಿಸಿರುವುದು ಇಂಡಸ್ಟ್ರಿಯಲ್ ಡಿಸಪ್ಯುಟ್ಸ್ ಆ?ಯಕ್ಟ್ 1947ನ ಆತ್ಮವನ್ನೇ ಉಲ್ಲಂಘಿಸುತ್ತದೆ. ನಿರಂತರ ಸೇವೆ ಸಲ್ಲಿಸಿರುವ ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕುವ ಮೊದಲು ನೋಟಿಸ್, ಪರಿಹಾರ ಮತ್ತು ಕಾನೂನುಬದ್ಧ ಪ್ರಕ್ರಿಯೆ ಪಾಲಿಸಬೇಕಾಗುತ್ತದೆ. ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಎಂದರು.

ಟಿಯುಸಿಐನ ರಾಜ್ಯ ಕಾರ್ಯದರ್ಶಿ ಎಂ.ಗಂಗಾಧರ ಮಾತನಾಡಿ, ಹೊರಗುತ್ತಿಗೆ ಕಾರ್ಮಿಕರ ಹೆಸರಿನಲ್ಲಿ ಶಾಶ್ವತವಾಗಿ ವರ್ಷಗಳ ಕಾಲ ಕೆಲಸ ಮಾಡಿಸಿಕೊಂಡು 1970ನ ಕಾನೂನು ಉಲ್ಲಂಘನೆಯಾಗಿದೆ. ಶಾಶ್ವತ ಸ್ವರೂಪದ ಕೆಲಸಗಳಿಗೆ ನಿರಂತರವಾಗಿ ಗುತ್ತಿಗೆ ಪದ್ಧತಿ ಬಳಸುವುದು ಕಾರ್ಮಿಕ ಶೋಷಣೆ ಮಾದರಿಯಾಗಿದೆ. ವಿಶ್ವವಿದ್ಯಾಲಯದ ಸ್ವಚ್ಛತೆ, ಭದ್ರತೆ, ಕಚೇರಿ, ನಿರ್ವಹಣೆ ಸೇರಿದಂತೆ ಅನೇಕ ಮೂಲಭೂತ ಸೌಕರ್ಯದ ಕೆಲಸ ಕಾರ್ಯ ವರ್ಷಗಳಿಂದ ನಿರ್ವಹಿಸಿದ ನೌಕರರನ್ನು ಹೊರಗುತ್ತಿಗೆ ಹೆಸರಿನಲ್ಲಿ ಅಸ್ಥಿರವಾಗಿಟ್ಟಿರುವುದು ಕಾರ್ಮಿಕ ವಿರೋಧಿ ನೀತಿಯಾಗಿದೆ. ಜೊತೆಗೆ ಹಳೆಯ ನೌಕರರನ್ನು ವಜಾಗೊಳಿಸಿ ಹೊಸ ನೇಮಕಾತಿಗಾಗಿ ಲಕ್ಷಾಂತರ ರೂಪಾಯಿ ಲಂಚ ವಸೂಲಿ ಮಾಡಲಾಗುತ್ತಿದೆ ಎಂಬ ಆರೋಪಗಳು ಅತ್ಯಂತ ಗಂಭೀರವಾಗಿವೆ.



ಇದು ಸತ್ಯವಾಗಿದ್ದರೆ, ಅದು ಕೇವಲ ಭ್ರಷ್ಟಾಚಾರವಲ್ಲ, ಬಡ ಕಾರ್ಮಿಕರ ಹೊಟ್ಟೆಯ ಮೇಲೆ ನಡೆಯುತ್ತಿರುವ ಸಂಘಟಿತ ದರೋಡೆ. ರಾಜ್ಯ ಸರ್ಕಾರ ಮತ್ತು ಉನ್ನತ ಶಿಕ್ಷಣ ಇಲಾಖೆ ಕೂಡಲೇ ನ್ಯಾಯಾಂಗ ತನಿಖೆ ನೇಮಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ವಿವಿಯ ಕುಲಸಚಿವರು ಕಾರ್ಮಿಕರ ಹೋರಾಟವನ್ನು "ಅಶಿಸ್ತು" ಎಂದು ಕರೆಯುತ್ತಿರುವುದು ಖಂಡನೀಯ. ಬದುಕಿಗಾಗಿ ಹೋರಾಡುವ ಕಾರ್ಮಿಕರ ಧ್ವನಿಯನ್ನು ದಮನಿಸುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ. ತಮ್ಮ ಕುಟುಂಬಗಳ ಉಳಿವಿಗಾಗಿ ಹೋರಾಡುತ್ತಿರುವ ಕಾರ್ಮಿಕರನ್ನು ಅಪರಾಧಿಗಳಂತೆ ಚಿತ್ರಿಸುವುದು ಆಡಳಿತದ ದೌರ್ಜನ್ಯ ಮನೋಭಾವವನ್ನು ತೋರಿಸುತ್ತದೆ.

ಇಂದು 281 ಕಾರ್ಮಿಕರನ್ನು ಕೆಲಸದಿಂದ ತೆಗೆದಿದ್ದಾರೆ. ನಾಳೆ ಇದೇ ಮಾದರಿಯನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು, ಸರ್ಕಾರಿ ಕಚೇರಿಗಳು, ಸಾರ್ವಜನಿಕ ವಲಯಗಳಲ್ಲಿ ಜಾರಿಗೊಳಿಸುವ ಅಪಾಯವಿದೆ. ಆದ್ದರಿಂದ ಇದು ಕೇವಲ 281 ಕುಟುಂಬಗಳ ಪ್ರಶ್ನೆಯಲ್ಲ, ಕರ್ನಾಟಕದ ಸಂಪೂರ್ಣ ಕಾರ್ಮಿಕ ವರ್ಗದ ಬದುಕಿನ ಪ್ರಶ್ನೆ? ಶ್ರಮಿಕ ಕಾರ್ಮಿಕರ ಬೆವರಿನಿಂದ ನಡೆಯುವ ವಿಶ್ವವಿದ್ಯಾಲಯಗಳು ಕಾರ್ಮಿಕರ ಬದುಕನ್ನೇ ನಾಶ ಮಾಡುವ ಕೇಂದ್ರಗಳಾಗಲು ನಾವು ಅವಕಾಶ ನೀಡುವುದಿಲ್ಲ. ಟಿಯುಸಿಐ ರಾಜ್ಯ ಸಮಿತಿ ಕಲಬುರ್ಗಿ ವಿಶ್ವವಿದ್ಯಾಲಯದ ಮುಂದೆ ನಡೆದಿರುವ ಹೋರಾಟ ಕಾರ್ಮಿಕರೊಂದಿಗೆ ದೃಢವಾಗಿ ನಿಲ್ಲುತ್ತದೆ ರಾಜ್ಯದ ಎಲ್ಲಾ ಕಾರ್ಮಿಕ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಶಕ್ತಿಗಳು ಈ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಕರೆ ನೀಡಿದರು.

ಟಿಯುಸಿಐ ಕರ್ನಾಟಕ ರಾಜ್ಯ ಸಮಿತಿಯ ಆಗ್ರಹಗಳು: ವಜಾಗೊಳಿಸಿದ ಎಲ್ಲಾ 281 ಹೊರಗುತ್ತಿಗೆ ನೌಕರರನ್ನು ಕೂಡಲೇ ಯಾವುದೇ ಷರತ್ತುಗಳಿಲ್ಲದೆ ಮರುನೇಮಕ ಮಾಡಬೇಕು. ವಿಶ್ವವಿದ್ಯಾಲಯದಿಂದಲೇ ನೇರ ವೇತನ ಪಾವತಿ ವ್ಯವಸ್ಥೆ ಜಾರಿಗೊಳಿಸಬೇಕು. ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿರುವ ನೌಕರರನ್ನು ಶಾಶ್ವತವಾಗಿ ಖಾಯಂ ಗೊಳಿಸಬೇಕು. ಕಾರ್ಮಿಕರನ್ನು ಹೊರಹಾಕಿ ಹೊಸ ನೇಮಕಾತಿಗೆ ಲಂಚ ವಸೂಲಿ ಆರೋಪಗಳ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು. ಕಾರ್ಮಿಕರ ಮೇಲೆ ಹೇರಲಾಗುತ್ತಿರುವ ಬೆದರಿಕೆ, ದಮನ ಮತ್ತು ಪ್ರತೀಕಾರಾತ್ಮಕ ಕ್ರಮಗಳನ್ನು ತಕ್ಷಣ ನಿಲ್ಲಿಸಬೇಕು. ಕಾರ್ಮಿಕ ಇಲಾಖೆ ಕೂಡಲೇ ಹಸ್ತಕ್ಷೇಪ ಮಾಡಿ ಕಾರ್ಮಿಕ ಕಾನೂನು ಉಲ್ಲಂಘನೆ ಕುರಿತು ವರದಿ ಸಲ್ಲಿಸಬೇಕು. ವಿಶ್ವವಿದ್ಯಾಲಯಗಳಲ್ಲಿ ಗುತ್ತಿಗೆ ಆಧಾರಿತ ಶೋಷಣಾ ವ್ಯವಸ್ಥೆಯನ್ನು ರದ್ದುಪಡಿಸಬೇಕು ಎಂದು ಆಗ್ರಹ ಪಡಿಸಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.